# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್‌–1/ಡಿಇ–199/2016/ಎ.ಆರ್‌.ಇ–14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು–560001,
ದಿನಾಂಕ: 20/07/2022.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರ – (1) **ಶ್ರೀ. ಪಿ.ಡಿ ಜಾಡರ,** ಹಿಂದಿನ ಕಾರ್ಯದರ್ಶಿ, ಅಖೇತಿ ಗ್ರಾಮ ಪಂಚಾಯತಿ, ಜೋಯಿಡಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ, ಪ್ರಸ್ತುತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ನಂದಿಗಡ್ಡೆ ಗ್ರಾಮ ಪಂಚಾಯಿತಿ (2) **ಶ್ರೀ. ಲಂಬೋದರ ಗಾಂವಕರ,** ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅಖೇತಿ ಗ್ರಾಮ ಪಂಚಾಯತಿ, ಪ್ರಸ್ತುತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅಗಸೂರ ಗ್ರಾಮ ಪಂಚಾಯತಿ (3) **ಶ್ರೀ. ಸಿ.ಜಿ ಹಿರೇಮಠ,** ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಅಖೇತಿ ಗ್ರಾಮ ಪಂಚಾಯಿತಿ, ಪ್ರಸ್ತುತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಉಳವಿ ಗ್ರಾಮ ಪಂಚಾಯತಿ (5) **ಶ್ರೀ. ಎಸ್.ಕೆ ನಾಯಕ,** ಉಪ ಯೋಜನಾ ವ್ಯವಸ್ಥಾಪಕರು, ಜಲನಿರ್ಮಲ ಯೋಜನೆ, ಜಿಲ್ಲಾ ನೆರವು ಘಟಕ, ಜಿಲ್ಲಾ ಪಂಚಾಯಿತಿ, ಉತ್ತರ ಕನ್ನಡ ಜಿಲ್ಲೆ, ಪ್ರಸ್ತುತ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಿ.ಆರ್.ಇ ಉಪ–ವಿಭಾಗ, ಕಾರವಾರ ಮತ್ತು (6) **ಶ್ರೀ. ಬಿ ಶಂಕರಪ್ಪ,** ಸಹಾಯಕ ನಿರ್ದೇಶಕರು (ತಾಂತ್ರಿಕ), ಜಲನಿರ್ಮಲ ಯೋಜನೆ, ಜಿಲ್ಲಾ ನೆರವು ಘಟಕ, ಜಿಲ್ಲಾ ಪಂಚಾಯತಿ, ಉತ್ತರ ಕನ್ನಡ, ಪ್ರಸ್ತುತ ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.2, ರಸ್ತೆ ಮತ್ತು ಸಂಪರ್ಕ ವಿಶೇಷ ಉಪ–ವಿಭಾಗ, ಅನೆಕ್ಸ್ ಕಟ್ಟಡ, ಕೆ.ಆರ್ ವೃತ್ತ, ಬೆಂಗಳೂರು ಇವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ: 1. ಕಂಪ್ಲೆಂಟ್/ಉಪಲೋಕ್/ಬಿಜಿಎಂ/3110/2012/ಎ.ಆರ್.ಇ-6 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 18/05/2016.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 110 ವಿಸೇಬಿ 2016, ಬೆಂಗಳೂರು, ದಿನಾಂಕ: 20/06/2016.
3. ನಾಮನಿರ್ದೇಶನ ಸಂಖ್ಯೆ:ಉಪಲೋಕ್-1/ಡಿಇ/199/2016, ಬೆಂಗಳೂರು ದಿನಾಂಕ: 24/06/2016.
4. Order No.UPLOK-1&2/DE/Transfers/2018 Bengaluru, Dtd: 06/08/2018 file is transferred from ARE-7 to ARE-14.

* * * * * *

ಈ ದೂರನ್ನು, ದೂರುದಾರರಾದ ಶ್ರೀ. **ನೆಲ್ಸೇನ್ ಶವೇರಾ ಡಿ. ಲೀಮಾ,** ತೈನಿಘಟ್ಟ, ಜೋಯಿಡಾ ತಾಲ್ಲೂಕು, ಕಾರವಾರ, ಉತ್ತರ ಕನ್ನಡ ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರರಾದ (1) **ಶ್ರೀ. ಪಿ.ಡಿ ಜಾಡರ,** ಹಿಂದಿನ ಕಾರ್ಯದರ್ಶಿ, ಅಖೇತಿ ಗ್ರಾಮ ಪಂಚಾಯತಿ, ಜೋಯಿಡಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ, ಪ್ರಸ್ತುತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ನಂದಿಗಡ್ಡೆ ಗ್ರಾಮ ಪಂಚಾಯಿತಿ (2) **ಶ್ರೀ. ಲಂಬೋದರ ಗಾಂವಕರ,** ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅಖೇತಿ ಗ್ರಾಮ ಪಂಚಾಯತಿ, ಪ್ರಸ್ತುತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅಗಸೂರ ಗ್ರಾಮ ಪಂಚಾಯತಿ (3) **ಶ್ರೀ. ಸಿ.ಜಿ ಹಿರೇಮಠ,** ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಅಖೇತಿ ಗ್ರಾಮ ಪಂಚಾಯಿತಿ, ಪ್ರಸ್ತುತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಉಳವಿ ಗ್ರಾಮ ಪಂಚಾಯತಿ (4) **ಶ್ರೀ. ಮುಕ್ಕಣ್ಣ ಕರಿಗರ,** ಉಪ ಯೋಜನಾ ವ್ಯವಸ್ಥಾಪಕರು, ಜಲನಿರ್ಮಲ ಯೋಜನೆ, ಜಿಲ್ಲಾ ನೆರವು ಘಟಕ, ಜಿಲ್ಲಾ ಪಂಚಾಯತಿ, ಉತ್ತರ ಕನ್ನಡ, ಪ್ರಸ್ತುತ ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತಿ, ರಾಯಚೂರು (5) **ಶ್ರೀ. ಎಸ್.ಕೆ ನಾಯಕ,** ಉಪ ಯೋಜನಾ ವ್ಯವಸ್ಥಾಪಕರು, ಜಲನಿರ್ಮಲ ಯೋಜನೆ, ಜಿಲ್ಲಾ ನೆರವು ಘಟಕ, ಜಿಲ್ಲಾ ಪಂಚಾಯಿತಿ, ಉತ್ತರ ಕನ್ನಡ ಜಿಲ್ಲೆ, ಪ್ರಸ್ತುತ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಿ.ಆರ್.ಇ ಉಪ-ವಿಭಾಗ, ಕಾರವಾರ ಮತ್ತು (6) **ಶ್ರೀ. ಬಿ ಶಂಕರಪ್ಪ,** ಸಹಾಯಕ ನಿರ್ದೇಶಕರು (ತಾಂತ್ರಿಕ), ಜಲನಿರ್ಮಲ ಯೋಜನೆ, ಜಿಲ್ಲಾ ನೆರವು ಘಟಕ, ಜಿಲ್ಲಾ ಪಂಚಾಯತಿ, ಉತ್ತರ

ಕನ್ನಡ, ಪ್ರಸ್ತುತ ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.2, ರಸ್ತೆ ಮತ್ತು ಸಂಪರ್ಕ ವಿಶೇಷ ಉಪ-ವಿಭಾಗ, ಅನೆಕ್ಸ್ ಕಟ್ಟಡ, ಕೆ.ಆರ್ ವೃತ್ತ, ಬೆಂಗಳೂರು ಇವರುಗಳ ವಿರುದ್ಧ ಸಲ್ಲಿಸಿರುತ್ತಾರೆ, ತಮ್ಮ ದೂರಿನಲ್ಲಿ ಎನ್‌ಆರ್‌ಇಜಿಎ 2010-11 ಮತ್ತು 2011-12ನೇ ಸಾಲಿನ ಆಖೇತಿ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಮೈದಾನ ಸಮತಲ ಮತ್ತು ಸಸ್ಯ ನಡೆಸುವುದು, ಇದರಲ್ಲಿ ಯಾವುದೇ ಕೆಲಸ ಆಗಿರುವುದಿಲ್ಲ ಆದರೆ ಕಾಗದ ಪತ್ರಗಳಲ್ಲಿ ಮಾತ್ರ ಆಗಿರುತ್ತದೆ ಅಂತಾ ಹೇಳಿರುತ್ತಾರೆ. ಮುಂದುವರೆದು 13ನೇ ಹಣಕಾಸಿನ ಯೋಜನೆಯಡಿಯಲ್ಲಿ 2010-11, 2011-12 ಮತ್ತು 2012-13ರಲ್ಲಿ ಒಟ್ಟು 41,96,731/-ಖರ್ಚಾಗಿದೆ ಆದರೆ ಎಲ್ಲಾ ಬಿಲ್ಲುಗಳು ನಕಲಿಯಾಗಿರುತ್ತವೆ. ಆಖೇತಿ ಗ್ರಾಮಪಂಚಾಯತಿ ಸದಸ್ಯನಾದ ಶ್ರೀ ವಿಲಾಸ ಗಾಂವಕರ ಇವರು ಚಾಲ್ತಿ ಸದಸ್ಯರಿದ್ದರೂ ಸಹಿತ ತನ್ನ ಸ್ವಂತ ಜಮೀನು ಅಂತಾ ನಮೂದಿಸಿ ಅದಕ್ಕೆ ತಡೆಗೋಡೆ ನಿರ್ಮಿಸಲು ಸರ್ಕಾರದಿಂದ 2011-12ನೇ ಸಾಲಿನಲ್ಲಿ ಸುಮಾರು 67,500/-ರೂ.ಗಳನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ. ಜಲನಿರ್ಮಲ ಪ್ರಾಜೆಕ್ಟ್, ಕಾರವಾರ ಬ್ಯಾಕ್-3ರಲ್ಲಿಯ 2008 ರಿಂದ 2010ರವರೆಗೆ ಅವ್ಯವಹಾರ ಆಗಿರುತ್ತದೆ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಬಂದ ಹಣ ದುರುಪಯೋಗವಾಗಿರುತ್ತದೆ ಅಂತಾ ದೂರನ್ನು ಸಲ್ಲಿಸಿರುತ್ತಾರೆ. ದೂರನ್ನು ಸಲ್ಲಿಸಿದ ನಂತರ ಈ ಪ್ರಕರಣವನ್ನು ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ವಹಿಸಿಕೊಟ್ಟಿದ್ದು ಅವರು ಶ್ರೀ ಎಂ. ದೇವಿಪ್ರಸಾದ, ಎಇಇ-2, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಇವರಿಗೆ ವಹಿಸಿಕೊಟ್ಟಿದ್ದು ಇವರು ತನಿಖೆಯನ್ನು ಕೈಗೊಂಡು ವರದಿಯನ್ನು ಸಲ್ಲಿಸಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 20/06/2016ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ವಹಿಸಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 24/06/2016 ರಂದು ಅಪರ

ನಿಬಂಧಕರು, ವಿಚಾರಣೆಗಳು-7 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು, ಉಲ್ಲೇಖ (4) ರಂತೆ ಅಪರ ನಿಬಂಧಕರು ವಿಚಾರಣೆಗಳು-7 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು-14 ರವರಿಗೆ ವರ್ಗಾವಣೆಗೊಂಡಿರುತ್ತದೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ ರವರುಗಳ ವಿರುದ್ಧ ದೋಷಾರೋಪಣೆ *(Articles of Charge)* ಅನ್ನು ಅಪರ ನಿಬಂಧಕರು, ವಿಚಾರಣೆಗಳು-7 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರುಗಳಿಗೆ ದಿನಾಂಕ: 28/06/2016 ರಂದು ಕಳುಹಿಸಲಾಗಿರುತ್ತದೆ.

## ಅನುಬಂಧ-1

## ದೋಷಾರೋಪಣೆ

2. That you DGO Nos. 1) Sri.P.D.Jadara, the then Secretary, Akhethi Gram Panchayath, Joida Taluk, Uttara Kannada District, Presently working as PDO, Nandigadde Gram Panchayath, 2) Sri.Lambodara Chandrakantha Gaonkar – the then PDO, Akhethi Gram Panchayath, presently working as PDO, Agasura Gram Panchayath, 3) Sri.C.H.Hiremath – the then PDO, Akhethi Gram Panchayath, presently working as PDO, Ulavi Gram Panchayath, 4) Sri.Mukkanna Karigara- Deputy Project Manager, Jala Nirmala Yojane, Zilla Neravu Ghataka, Z.P,

Uttara Kannada District, presently working as Deputy Secretary, Zilla Panchayath, Raichur, 5) Sri.S.K.Naik - Deputy Project Manager, Jala Nirmala Yojane, Zilla Neravu Ghataka, Z.P, Uttara Kannada District, presently working as Assistant Executive Engineer, PRE Sub-Division, Karwar and 6) Sri.B.Shankarappa – Assistant Director (Technical), Jala Nirmala Yojane, Zilla Neravu Ghataka, Z.P, Uttara Kannada District, presently working as Assistant Executive Engineer No.2, Road and communication Special Sub-division, Annex building, 5th Floor, K.R.Circle, Bangalore while discharging your duties:

i. Excess measurements were recorded in the measurement book in respect of tar work of the road in Tinaighat Village during the year 2011-12 and thus an amount of Rs.39,418/- is found wasteful expenditure.

ii. An amount of Rs.10,059/- is the wasteful expenditure on account of showing excess measurements of CC Road in Tinaighat village during 2011-12.

iii. Even though three chlorination units at the cost of Rs.38,400 each are installed in 3 pumping house for supply of drinking water in Tinaighat village during the year 2011-12, the same are not found working and

they are disconnected and so amount of Rs.1,15,200/- is wasteful expenditure.

and thereby you failed to maintain absolute integrity and devotion to duty and committed an act which is unbecoming of Government Servants and thus you are guilty of misconduct under Rule 3(1)(i) to (iii) of KCS (Conduct) Rules 1966.

## ಅನುಬಂಧ-2

## ದೋಷಾರೋಪಣೆಯ ವಿವರ

## (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡಕ್ಟ್)

3. An investigation was taken up under Section 9 of Karnataka Lokayukta Act, in the complaint filed by Sri.Nelson Shavera D'Leema, R/o Thinaighata, Joida Taluk, Karwar, Uttara Kananda District (hereinafter referred to as 'complainant' for short), against 1) Sri. P.D Jadara, the then Secretary, Akhethi Gram Panchayath, Joida Taluk, Uttara Kannada District, Presently working as PDO, Nandigadde Gram Panchayath, 2) Sri. Lambodara Chandrakantha Gaonkar – the then PDO, Akhethi Gram Panchayath, presently working as PDO, Agasura Gram Panchayath, 3) Sri. C.H Hiremath – the then PDO, Akhethi Gram Panchayath, presently working as

8

PDO, Ulavi Gram Panchayath, 4) Sri. Mukkanna Karigara- Deputy Project Manager, Jala Nirmala Yojane, Zilla Neravu Ghataka, Z.P, Uttara Kannada District, presently working as Deputy Secretary, Zilla Panchayath, Raichur, 5) Sri. S.K Naik - Deputy Project Manager, Jala Nirmala Yojane, Zilla Neravu Ghataka, Z.P, Uttara Kannada District, presently working as Assistant Executive Engineer, PRE Sub-Division, Karwar and 6) Sri. Bengaluru Shankarappa – Assistant Director (Technical), Jala Nirmala Yojane, Zilla Neravu Ghataka, Z.P, Uttara Kannada District, presently working as Assistant Executive Engineer No.2, Road and communication Special Sub-division, Annex building, 5th Floor, K.R.Circle, Bangalore (hereinafter referred to as Delinquent Government Officials, in Short DGO Nos.1 to 6) and alleging that they are being public servants, have committed misconduct.

4. **According to the Complainant**: The DGOs have misappropriated the funds under the following heads of works:

   i. MGNREGA:- Under the cover of undertaking leveling the ground and plantation in schools and hospital of different villages of Akhethi Panchayath in Joida Taluka, money

&

is misappropriated without executing the works.

a. Laying Bands (Bondara)

Bunds are not formed in the lands in the limits of Akhethi, Anmod, Vironjol, Payaswadi, Vithalwad (Devalli) and in the land of Arjun Nandagadkar in the limits of Karatgali village. Works are shown as executed only on papers.

b. Vilas Gaonkar – Present President of Panchayath had built wall in his land by misusing the funds of Akhethi Gram Panchayath while he was the member of the said Gram Panchayath.

ii. Regarding misappropriation of funds of 13th Financial plan.

Without carrying works in Akethi Gram Panchayath they have misappropriated funds of 13th financial plan by creating bogus bills.

iii. Regarding misappropriation of funds in Jala Nirmala Yojane, President and PDO of the Gram Panchayath have misappropriated the

&

amounts in Jala Nirmala Yojane without carrying out work as well as they have changed the old water scheme into new water scheme.

5. Thereafter, the complaint was referred to Chief Engineer, Technical Wing, Karnataka Lokayukta, Bangalore, who inturn referred the same to Sri.M.Deviprasad, AEE-2, TAC, Karnataka Lokayukta, Bangalore (who will be hereinafter referred to as I.O. for short). Accordingly, after investigation, the I.O. has submitted report stating that instead of undertaking the approved work of planting saplings in the school ground coming in Akhethi Gram Panchayath limits under MNREGA scheme of 2010-2012, the work of construction of compound wall and levelling of school ground not approved and estimated was undertaken and photographs of 3 stages of the said works undertaken as required by the guidelines were not taken and preserved and the DGO Nos.1 to 6 are responsible for the same.

6. Thereafter, comments/objections have been called for from the DGOs on the said report. The DGO Nos.5 and 6 have submitted reply/comments by denying

8

the allegations. But, the DGO Nos.1 to 4 have not submitted their reply.

7. ***A careful consideration of the material on record shows***:-

i. Excess measurements were recorded in the measurement book in respect of tar work of the road in Tinaighat Village during thc year 2011-12 and thus an amount of Rs.39,418/- is found wasteful expenditure.

ii. An amount of Rs.10,059/- is the wasteful expenditure on account of showing excess measurements of CC Road in Tinaighat village during 2011-12.

iii. Even though three chlorination units at the cost of Rs.38,400 each are installed in 3 pumping house for supply of drinking water in Tinaighat village during the year 2011-12, the same are not found working and they are disconnected and so amount of Rs.1,15,200/- is wasteful expenditure.

8. In view of the facts stated above and on considering the material on record, comments of the DGO Nos.5 & 6 have not been found satisfactory to drop the proceedings.

9. The facts supported by the material on record prima facie show that the DGO Nos.1 to 6 being public servants, have failed to maintain absolute integrity besides absolute devotion to duty and also acted in a manner unbecoming of Government Servants and thereby committed misconduct and made themselves liable for disciplinary action.

10. Since said facts and material on record prima facie show that the DGO Nos.1 to 6 have committed misconduct under Rule 3 (1) of the KCS Conduct Rules, 1966, recommendation is made under Section 12(3) of the Karnataka Lokayukta Act, to the Competent Authority to initiate disciplinary proceedings against the DGOs and to entrust the inquiry to this Institution under Rule 14-A of the Karnataka Civil Services (Classification, Control and Appeal) Rules, 1957.

11. The Government after considering the recommendation made in the report, entrusted the matter to the Hon'ble Upalokayukta to conduct departmental/disciplinary proceedings against the DGOs and to submit report. Hence the charge.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರುಗಳಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ–1 & 3 ರವರು ದಿನಾಂಕ: 21/09/2016;

ಆ.ಸ.ನೌ–2 & 6 ರವರು ದಿನಂಕ: 30/06/2016; ಆ.ಸ.ನೌ–5 ದಿನಾಂಕ: 10/08/2016 ರಂದು ಹಾಜರಾಗಿದ್ದು, ಆ.ಸ.ನೌ.ರವರುಗಳ ಪ್ರಥಮ ಮೌಖಿಕ ಹೇಳಿಕೆ, ನಿಯಮ–11 ಕೆ.ಸಿ.ಎಸ್ (ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರುಗಳಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.ರವರುಗಳಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು. ಆ.ಸ.ನೌ–1 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ ದೂರುದಾರರು ದೂರಿನಲ್ಲಿ ಆಪಾದಿಸಿದ ವಿಷಯವು ಸುಳ್ಳು ಮತ್ತು ಸತ್ಯಕ್ಕೆ ದೂರವಾಗಿರುತ್ತದೆ ಅಂತಾ ಹೇಳಿರುತ್ತಾರೆ. ತನಿಖಾಧಿಕಾರಿಯವರು 2ದಿನಗಳ ಕಾಲ ನಡೆಸಿದ ಸ್ಥಳಪರಿವೀಕ್ಷಣೆಯಲ್ಲಿ ದೂರುದಾರರು ಮಾಡಿರುವ ಕಾಮಗಾರಿಯು ಅಂದಾಜಿಗೆ ತಕ್ಕಂತೆ ನಿರ್ವಹಿಸಿಲ್ಲ ಅಥವಾ ಅಂದಾಜಿನಲ್ಲಿ ಅಳವಡಿಸಿಕೊಂಡಿರುವಂತೆ ಕಾಮಗಾರಿ ನಿರ್ವಹಿಸಿಲ್ಲ ಎಂಬ ಮಾಹಿತಿಯನ್ನು ತಮ್ಮ ಮಹಜರಗಳಲ್ಲಿ ನಮೂದಿಸಿರುವುದಿಲ್ಲ. ಆದರೆ ತನಿಖಾಧಿಕಾರಿಗಳು ತಾವೇ ಸ್ವತ: ಬರೆದಿರುವ ಮಹಜರಗಳ ಅಂಶಗಳನ್ನು ಹೊರತುಪಡಿಸಿ ತಮ್ಮ ತನಿಖಾ ವರದಿಯಲ್ಲಿ ದೂರುದಾರರ ಆಪಾದನೆಗಳನ್ನು ಸಾಭೀತುಪಡಿಸಲು ಮಹಜರನಲ್ಲಿರುವ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳದೆ ತಮಗೆ ತಿಳಿಯದ ಹಾಗೆ ವರದಿಯನ್ನು ಸಿದ್ದಪಡಿಸಿರುತ್ತಾರೆ ಅಂತಾ ಹೇಳಿರುತ್ತಾರೆ. ದೋಷಾರೋಪಣೆಯಲ್ಲಿ ಹೇಳಿದ ವಿಷಯದ ಬಗ್ಗೆ ತಾನು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂತಾ ಹೇಳಿರುತ್ತಾರೆ.

7. ಆ.ಸ.ನೌ–2 ರವರು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಆಸನೌ–3ರವರು ಆಸನೌ–1 ಇವರು ಹೇಳಿದ ಹಾಗೆ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

8. ಆಸನೌ–5 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ ತಾನು ದಿ:8–6–2011ರಿಂದ 30–10–2011ರವರೆಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾಗಿ ಕರ್ತವ್ಯನಿರ್ವಹಿಸಿರುತ್ತೇನೆ ಅಂತಾ ಹೇಳಿರುತ್ತಾರೆ. ತಿನ್ನೈಘಟ್ಟ ಗ್ರಾಮದಲ್ಲಿ ರಸ್ತೆಯ ಕಾಮಗಾರಿ ಮತ್ತು ಚರಂಡಿಯ ಕಾಮಗಾರಿಯಲ್ಲಿ ತನ್ನ ಹೆಸರು ನಮೂದು ಇರುವುದಿಲ್ಲ ಮತ್ತು ಅಧ್ಯಕ್ಷರು/ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಆಖೇತಿ ಇವರು ನೀಡಿದ ಚೆಕ್ಕಿನ ಮೇಲೆ ತನ್ನ ಸಹಿ ಇರುವುದಿಲ್ಲ ಎಂದು ಹೇಳಿರುತ್ತಾರೆ. ದೋಷಾರೋಪಣೆಯಲ್ಲಿ ಹೇಳಿದ ವಿಷಯದ ಬಗ್ಗೆ ತಾನು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂತಾ ಹೇಳಿರುತ್ತಾರೆ.

9. ಆ.ಸ.ನೌ–6 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ he worked as Assistant Executive Engineer during the period from 24-06-2011 to 22-06-2012. It is further submitted that he carried out the work as per the specification in a right time but the investigation authority investigated the said works after laps of 3years by the time the road surface works would normally lose its originality because of wear and tear and heavy rains particularly in the said reasons. Therefore the expenditure of Rs.39,488/- is not to be treated as vest full expenditure. Similarly in respect of financial loss of Rs.10,059/-, the measurements were altered slightly to the needs of the people of the said place and the overall measurements of the said road had become more as it is 168sq.mtrs. as against 140sq.mtrs. Hence, it is the 28sq.mtrs. more than the given measurements. Hence there is a savings of Rs.14,082/- in respect of the said works. Hence he prayed for the to drop the proceedings.

B-

10. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರವು ತಮ್ಮ ಪರವಾಗಿ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ಮಾಡಿಸಿದ್ದು, ನಿ.ಪಿ.1 ರಿಂದ 10 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ತನಿಕಾಧಿಕಾರಿಗಳಾದ ಶ್ರೀ. ಎಂ ದೇವಿಪ್ರಸಾದ, ಹಿಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರರು ಇವರನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷ್ಯ ಮಾಡಿಸಿದ್ದು, ನಿ.ಪಿ.11 ರಿಂದ 20 ವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌ–5 ರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದಿದ್ದು, ತಮ್ಮ ಪರವಾಗಿ ನಿ.ಡಿ.1 ರಿಂದ 6 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌ–6 ರವರು ತಮ್ಮ ಡಿ.ಡಬ್ಲ್ಯೂ.2 ಎಂದು ಸಾಕ್ಷಿ ನುಡಿದಿರುತ್ತಾರೆ. ಆ.ಸ.ನೌ–1 ರವರು ತಮ್ಮ ಡಿ.ಡಬ್ಲ್ಯೂ.3 ಎಂದು ಸಾಕ್ಷಿ ನುಡಿದಿರುತ್ತಾರೆ. ಆ.ಸ.ನೌ–2 ಮತ್ತು 3 ರವರು ತಮ್ಮ ಸಾಕ್ಷಿಯನ್ನು ಮಾಡಿಸಿರುವುದಿಲ್ಲ.

11. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು. ಆ.ಸ.ನೌ ರವರುಗಳು ತಮ್ಮ ಲಿಖಿತ ವಾದವನ್ನು ಮಂಡಿಸಿರುತ್ತಾರೆ.

12. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರುಗಳ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

13. ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

14. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1 ಮತ್ತು 2: ಭಾಗಶಃ ಸಕಾರಾತ್ಮಕವಾಗಿ.**
**ಅಂಶ 3: ನಕಾರಾತ್ಮಕವಾಗಿ**

**ಅಂಶ 4: ಅಂತಿಮ ಆದೇಶದಂತೆ.**

## ಕಾರಣಗಳು

15. ದೂರುದಾರರಾದ **ಶ್ರೀ. ನೆಲ್ಸೀನ್ ಶವೇರಾ ಡಿ. ಲೀಮಾ,** ತೈನಿಘಟ್ಟ, ಜೋಯಿಡಾ ತಾಲ್ಲೂಕು, ಕಾರವಾರ, ಉತ್ತರ ಕನ್ನಡ ಜಿಲ್ಲೆ ಇವರು ತಮ್ಮ ದೂರನ್ನು ಸಲ್ಲಿಸಿರುತ್ತಾರೆ. ಈ ವಿಷಯದ ಬಗ್ಗೆ ಈಗಾಗಲೇ ಮೇಲ್ಕಂಡಂತೆ ಉಲ್ಲೇಖಿಸಲಾಗಿದೆ.

16. ಶಿಸ್ತು ಪ್ರಾಧಿಕಾರ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ನುಡಿಸಾಕ್ಷಿ ಮಾಡಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಿ.ಪಿ.1 ರಿಂದ 10 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ನಿ.ಪಿ.1 ಈ ಸಂಸ್ಥೆಗೆ ನೀಡಿದ ದೂರು; ನಿ.ಪಿ.2 ಫಾರಂ ನಂ.1 ಮತ್ತು ನಿ.ಪಿ.3 ಫಾರಂ ನಂ.2; ನಿ.ಪಿ.4 ದಿ:1-10-2011ರಂದು ಆಖೇತಿ ಗ್ರಾಮಪಂಚಾಯತಿ ಕಾರ್ಯದರ್ಶಿ ನೀಡಿದ ಉತ್ತರ, ನಿ.ಪಿ.5 ಮತ್ತು ನಿ.ಪಿ.6 ದಿ:16-06-2012, 20-09-2012ರಂದು ಆಖೇತಿ ಗ್ರಾಮಪಂಚಾಯತಿಯ ಕಾರ್ಯದರ್ಶಿಯವರು ನೀಡಿದ ಉತ್ತರ, ನಿ.ಪಿ.7 ಇದು ದಿ:28-07-2012 ರಂದು ಸಾರ್ವಜನಿಕ ಮಾಹಿತಿ ಅಧಿಕಾರಿ, ಉತ್ತರಕನ್ನಡ ಜಿಲ್ಲಾ ಪಂಚಾಯತ್, ಕಾರವಾರ ಇವರು ಪಿಡಿಓ, ಆಖೇತಿ ಗ್ರಾಮಪಂಚಾಯತಿಯವರಿಗೆ ಬರೆದ ಪತ್ರ, ನಿ.ಪಿ.8 ದಿ:17-10-2012 ರಂದು ಸರ್ಕಾರದ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆ, ಬೆಂಗಳೂರು ಇವರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಉತ್ತರಕನ್ನಡ ಇವರಿಗೆ ನೀಡಿದ ಆದೇಶ, ನಿ.ಪಿ.9 ದಿ:18-10-2012ರಂದು ಸಾರ್ವಜನಿಕ ಮಾಹಿತಿ ಅಧಿಕಾರಿ, ಉತ್ತರ ಕನ್ನಡ ಜಿಲ್ಲಾ ಪಂಚಾಯತ್, ಕಾರವಾರ ರವರು ಕಾರ್ಯನಿರ್ವಾಹಕ

ಅಧಿಕಾರಿ, ತಾಲ್ಲೂಕು ಪಂಚಾಯತ್, ಜೋಯಿಡಾರವರಿಗೆ ಬರೆದ ಪತ್ರ, ನಿ.ಪಿ.10 ಇದು ದೂರುದಾರನ ಪ್ರತ್ಯುತ್ತರಗಳನ್ನು ಗುರುತಿಸಿಕೊಂಡಿರುತ್ತಾರೆ.

17. ಪಿ.ಡಬ್ಲ್ಯೂ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, 2006ರಿಂದ 2010ರವರೆಗೆ ಜಲನಿರ್ಮಲ ಯೋಜನೆ, ಕಾರವಾರ ಇವರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಅಭಿವೃದ್ಧಿ ಕಾರ್ಯಕ್ಕಾಗಿ ಬಂದಂತಹ ಅನುಧಾನ ಹಣದಲ್ಲಿ ದುರುಪಯೋಗವಾಗಿದ್ದು, ಇನ್ನಿತರ ಕಾರ್ಯಗಳಲ್ಲಿಯೂ ಹಣ ದುರುಪಯೋಗವಾಗಿರುತ್ತದೆ ಅಂತಾ ದೂರನ್ನು ಸಲ್ಲಿಸಿರುತ್ತೇನೆ ಅಂತಾ ನುಡಿದಿರುತ್ತಾರೆ. ಮುಂದುವರೆದು ತಾನು ಆಸನೌರವರ ವಿರುದ್ಧ ದೂರನ್ನು ನೀಡಿರುವುದಿಲ್ಲ ಲೋಕಪ್ರತಿನಿಧಿಗಳ ವಿರುದ್ಧ ಅಂದರೆ ಆಖೇತಿ ಗ್ರಾಮಪಂಚಾಯತಿಯ ಅಧ್ಯಕ್ಷರು ಮತ್ತು ಸದಸ್ಯರ ವಿರುದ್ಧ ದೂರನ್ನು ನೀಡಿರುತ್ತೇನೆ ಅಂತಾ ಹೇಳಿರುತ್ತಾರೆ.

18. ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ಶ್ರೀ ಎಂ. ದೇವಿಪ್ರಸಾದ, ಕರ್ನಾಟಕ ಲೋಕಾಯುಕ್ತ, ತಾಂತ್ರಿಕ ವಿಭಾಗದಲ್ಲಿ ಇವರನ್ನು ತನಿಖಾಧಿಕಾರಿಗಳು ಅಂತಾ ನೇಮಿಸಿದ್ದು ಅವರ ಸಾಕ್ಷಿಯನ್ನು ಮಾಡಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದೂರುದಾರರು 2010 ಮತ್ತು 2012ನೇ ಅವಧಿಯಲ್ಲಿ ನರೇಗಾ ಯೋಜನೆಯಲ್ಲಿ ಕೈಗೊಂಡ 1) ಸರ್ಕಾರಿ ಶಾಲೆಗಳ ಮೈದಾನ ಸಮತಟ್ಟು ಮಾಡುವುದು, 2) ಸಸಿ ನಡೆಸುವುದು, 3) ಸಂರಕ್ಷಣಾ ಕಾಮಗಾರಿ, 4) 13ನೇ ಹಣಕಾಸಿನ ಯೋಜನೆಯಡಿಯಲ್ಲಿ ಕೈಗೊಂಡಿರುವ ರಸ್ತೆ ಮತ್ತು ಚರಂಡಿ ಕಾಮಗಾರಿಗಳಲ್ಲಿ 5) ಜಲನಿರ್ಮಲ ಯೋಜನೆಯಡಿ ತಿನ್ನೈಘಾಟ ಗ್ರಾಮದಲ್ಲಿ ಕೈಗೊಂಡಿರುವ ರಸ್ತೆ ಮತ್ತು ಚರಂಡಿ ಕಾಮಗಾರಿಗಳು ಹಾಗೂ 6) ತಿನ್ನೈಘಾಟ ಮತ್ತು ಮರಸಂಗಳ ಗ್ರಾಮದಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಯಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳಲ್ಲಿ ಅವ್ಯವಹಾರ ಮಾಡಿರುವುದಾಗಿ ಆರೋಪ ಮಾಡಿರುತ್ತಾರೆ. ನಂತರ ಇವರು ತನಿಖೆಯನ್ನು ಕೈಗೊಂಡು ನಿ.ಪಿ.16ರಂತೆ ವರದಿಯನ್ನು ಸಲ್ಲಿಸಿರುತ್ತಾರೆ ಅಂತಾ ನುಡಿದಿರುತ್ತಾರೆ.

R

19. ಆ.ಸ.ನೌ–5 ರವರು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿ:8–6–2011 ರಿಂದ 31–10–2011ರವರೆಗೆ ಜಲನಿರ್ಮಲ ಇಲಾಖೆ ಡಿಪಿಎಂ (ಜಿಲ್ಲಾ ನೆರವು ಘಟಕ ವ್ಯವಸ್ಥಾಪಕ)ರಾಗಿ ಹೆಚ್ಚುವರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ ಅಂತಾ ನುಡಿದಿರುತ್ತಾರೆ. ಇವರ ಮೂಲ ಹುದ್ದೆ ಪ್ರಭಾರ ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ವಿಭಾಗ, ಕಾರವಾರ ಅಂತಾ ಹೇಳಿರುತ್ತಾರೆ. ಜೊಯಿಡಾ ತಾಲ್ಲೂಕಿನ ಆಖೇತಿ ಗ್ರಾಮಪಂಚಾಯತಿಯಲ್ಲಿ ತಿನ್ನೈಘಾಟ ರಸ್ತೆ ಮತ್ತು ಚರಂಡಿ ಕಾಮಗಾರಿ ಆದ ಅವ್ಯವಹಾರದ ಕಾಮಗಾರಿಗೆ ಸಂಬಂಧಪಟ್ಟಂತೆ ಕಾಮಗಾರಿಯ ಅಳತೆಯನ್ನು ಪರಿಶೀಲಿಸಿರುವುದಿಲ್ಲ, ಹಣಕಾಸಿಗೆ ಬಿಲ್ಲುಗಳನ್ನು ತಾನು ಪಾಸುಮಾಡಿರುವುದಿಲ್ಲ ಹೀಗಾಗಿ ಈ ಪ್ರಕರಣದ ಕಾಮಗಾರಿಗಳ ಬಗ್ಗೆ ಮತ್ತು ತನಗೂ ಯಾವುದೇ ಸಂಬಂಧ ಇರುವುದಿಲ್ಲವೆಂದು ನುಡಿದಿರುತ್ತಾರೆ. ಇವರು ನಿ.ಡಿ.1ರಿಂದ ನಿ.ಡಿ.6 ದಾಖಲಾತಿಗಳನ್ನು ಗುರುತಿಸಿಕೊಂಡಿದ್ದು ನಿ.ಡಿ.1 ಮತ್ತು ನಿ.ಡಿ.2 ಇದು ಸಿಟಿಸಿಗಳ ಪ್ರತಿ, ನಿ.ಡಿ.3 ಅಳತೆ ಪುಸ್ತಕದ ದೃಢೀಕೃತ ನಕಲು, ನಿ.ಡಿ.4 ಕರ್ತವ್ಯದಿಂದ ಬಿಡುಗಡೆಹೊಂದಿದ ಬಗ್ಗೆ ಪ್ರತಿ. ನಿ.ಡಿ.5 ಕಾಮಗಾರಿಯ ಬಿಲ್ಲು, ನಿ.ಡಿ.6 ಹಣ ಪಾವತಿಸಿದ ಬಗ್ಗೆ ಚೆಕ್ಕಿನ ಪ್ರತಿ.

20. ಆಸನೌ–6 ಇವರು ಡಿಡಬ್ಲ್ಯೂ–2ಎಂದು ಸಾಕ್ಷಿ ನುಡಿದಿದ್ದು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿ:24–06–2011 ರಿಂದ 22–06–2012ರವರೆಗೆ ಕಾರವಾರದ ಜಲನಿರ್ಮಲ ಯೋಜನೆ ಕಚೇರಿಯಲ್ಲಿ ಸಹಾಯಕ ನಿರ್ದೇಶಕರು (ತಾಂತ್ರಿಕ) ನಾಗಿ ಕರ್ತವ್ಯನಿರ್ವಹಿಸಿರುತ್ತೇನೆ ಅಂತಾ ನುಡಿದಿರುತ್ತಾರೆ. ಜಲನಿರ್ಮಲ ಯೋಜನೆಯಡಿಯ ಕಾಮಗಾರಿಗಳಲ್ಲಿ ಜೋಯಿಡಾ ತಾಲ್ಲೂಕಿನ ಆಖೇತಿ ಗ್ರಾಮಪಂಚಾಯತಿಯಲ್ಲಿ ತಿನ್ನೈಘಾಟ ರಸ್ತೆ ಮತ್ತು ಚರಂಡಿ ಕಾಮಗಾರಿಯ ಬಗ್ಗೆ ಮೇಲ್ವಿಚಾರಣೆಯನ್ನು ಇವರೇ ಮಾಡಿದ್ದು, ಅನುಮೋದಿತ ಅಂದಾಜುಪಟ್ಟಿ ಮತ್ತು ಟೆಂಡರ್ ಕರಾರಿನ ಪ್ರಕಾರ ಕರ್ತವ್ಯ ನಿರ್ವಹಿಸಿದ್ದು, ಸದರಿ ಕಾಮಗಾರಿ ದಿ:9–11–2011ರಲ್ಲಿ ಮುಕ್ತಾಯಗೊಂಡಿರುತ್ತದೆ ಅಂತಾ ನುಡಿದಿರುತ್ತಾರೆ. ಮುಂದುವರೆದು ಈ ಆಖೇತಿ ಗ್ರಾಮಪಂಚಾಯತಿಯ ತಿನ್ನೈಘಾಟ ರಸ್ತೆ ದಟ್ಟ ಅರಣ್ಯದೊಳಗೆ ಇದ್ದು, ಇಲ್ಲಿ ಸರಾಸರಿ 6ಮಿಮೀ

ಮಳೆ ಬರುತ್ತದೆ. ಈ ಮಳೆಯಿಂದ ಆ ರಸ್ತೆಯ ಮೇಲ್ಪದರ ಹಾಳಾಗಿರುತ್ತದೆ ಆದರೆ ಕಾಮಗಾರಿಯನ್ನು ಚೆನ್ನಾಗಿಯೇ ನಿರ್ವಹಿಸಿರುತ್ತೇನೆ ಅಂತಾ ನುಡಿದಿರುತ್ತಾರೆ.

21. ಮುಂದುವರೆದು 2ನೇ ಕಾಮಗಾರಿಯಾದ ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕೆ ಸಂಬಂಧಪಟ್ಟಂತೆ 70ಮೀ ಉದ್ದ 2ಮೀ. ಅಗಲ, 0.1ಮೀ ದಪ್ಪ ಕಾಮಗಾರಿಯನ್ನು ನಿರ್ವಹಿಸಲು ಅಂದಾಜಿನಲ್ಲಿ ಅವಕಾಶ ಇತ್ತು. ಪಂಚಾಯತಿ ಅಧ್ಯಕ್ಷರು, ವಿಡಬ್ಲ್ಯೂಎಸ್ಎಸ್ಸಿ ಅಧ್ಯಕ್ಷರು ಮತ್ತು ಗ್ರಾಮಸ್ಥರ ಬೇಡಿಕೆ ಮತ್ತು ಅವಶ್ಯಕತೆಗೆ ಅನುಗುಣವಾಗಿ 60ಮೀ ಉದ್ದ, 2.8ಮೀ ಅಗಲ ಮತ್ತು 0.1ದಪ್ಪ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಿರುತ್ತೇವೆ. 'ಇದರಲ್ಲಿ ಘನಮೀಟರ' ಅಳತೆಯಲ್ಲಿ ತೆಗೆದುಕೊಂಡಾಗ 2.8ಮೀ ಹೆಚ್ಚಿಗೆ ರಸ್ತೆಯನ್ನು ಮಾಡಿದ್ದು ಆದರೆ ಗುತ್ತಿಗೆದಾರರಿಗೆ ಹಣ ಪಾವತಿಸಿರುವುದು 14ಘನ ಮೀಟರ್‌ಗೆ ಮಾತ್ರವೇ ಆಗಿರುತ್ತದೆ. ಆದ್ದರಿಂದ ಯಾವುದೇ ಹಣವನ್ನು ದುರುಪಯೋಗಪಡಿಸಿಕೊಂಡಿರುವುದಿಲ್ಲ ಅಂತಾ ನುಡಿದಿರುತ್ತಾರೆ. ಮುಂದುವರೆದು 3ನೇಯ ಆರೋಪವಾದ ಕ್ಲೋರಿನೈಜೇಷನ್‌ಗೆ ಸಂಬಂಧಪಟ್ಟಂತೆ ತನಗೆ ಯಾವುದೇ ವಿಷಯ ಗೊತ್ತಿರುವುದಿಲ್ಲ ಇದಕ್ಕೆ ಸಂಬಂಧಪಟ್ಟಂತೆ ತಾನು ಯಾವುದೇ ಕೆಲಸವನ್ನು ಮಾಡಿರುವುದಿಲ್ಲ ಹಾಗೂ ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ಈ ಆರೋಪಕ್ಕೆ ಸಂಬಂಧಪಟ್ಟಂತೆ ತಮ್ಮ ಹೆಸರನ್ನು ನಮೂದಿಸಿರುವುದಿಲ್ಲ ಅಂತಾ ನುಡಿದಿರುತ್ತಾರೆ.

22. ಆಸನೌ–1 ಇವರು ಡಿಡಬ್ಲ್ಯೂ–3 ಆಗಿ ಸಾಕ್ಷಿ ನುಡಿದಿದ್ದು, 2008–09ನೇ ಸಾಲಿನಲ್ಲಿ ಆಖೇತಿ ಗ್ರಾಮಪಂಚಾಯತಿಯಲ್ಲಿ ಕಾರ್ಯದರ್ಶಿಯಾಗಿದ್ದು ನಂತರ 2010–11ನೇ ಸಾಲಿನಲ್ಲಿ ಪ್ರಭಾರ ಪಿಡಿಓ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ ಅಂತಾ ನುಡಿದಿರುತ್ತಾರೆ. ತಾನು ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುತ್ತಿದ್ದಾಗ ಗ್ರಾಮಪಂಚಾಯತಿಯ ಪಿಡಿಓ ಆಗಿ ಲಂಬೋದರ ಗಾಂವಕರ ಇವರು ಕರ್ತವ್ಯ ನಿರ್ವಹಿಸುತ್ತಿದ್ದರು ಅಂತಾ ಹೇಳುತ್ತಾರೆ. ಈ ಕಾಮಗಾರಿಗೆ ಸಂಭಂಧಪಟ್ಟಂತೆ ಅಳತೆ ಪುಸ್ತಕದಲ್ಲಿ ನಮೂದು ಇರುವ ವಿಷಯಗಳನ್ನು ಇಂಜಿನಿಯರ್ ಇವರು ಮಾಡಿದ್ದು, ನಂತರ ಗ್ರಾಮಪಂಚಾಯತಿಯಲ್ಲಿ ಅದು ಅನುಮೋದನೆಗೊಂಡು ಬಿಲ್ಲಿನ ಹಣವನ್ನು ಪಾವತಿ ಮಾಡಲಾಗಿರುತ್ತದೆ. ಅಧ್ಯಕ್ಷರು, ಕಾರ್ಯದರ್ಶಿ/ಪಿಡಿಓ ಇವರ ಸಹಿ ಹಾಕಿದ ನಂತರ ಬಿಲ್ಲಿನ

8

ಹಣವನ್ನು ಪಾವತಿ ಮಾಡಲಾಗುತ್ತದೆ. ಸ್ಥಳ ಪರಿಶೀಲನೆಯನ್ನು ಎಇಇರವರು ಮಾಡಿರುತ್ತಾರೆ. ಕಾಮಗಾರಿಗೆ ಕೂಲಿಗಾರರಿಗೆ ಅಕೌಂಟ್ ಪೇ ಮೂಲಕ ಚೆಕ್ಕನ್ನು ನೀಡಲಾಗಿರುತ್ತದೆ. ಕಾಮಗಾರಿಯನ್ನು ಪೂರ್ಣಗೊಳಿಸುವುದರ ಬಗ್ಗೆ ಸಹಾಯಕ ಅಭಿಯಂತರರು ಮತ್ತು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಸ್ಥಳ ಪರಿಶೀಲನೆ ಮಾಡಿದ ನಂತರ ಸಹಿ ಮಾಡಿ ಪ್ರಮಾಣ ಪತ್ರ ನೀಡಿರುತ್ತಾರೆ.

23.ಆಸನೌ–3 ಇವರು ಡಿಡಬ್ಲ್ಯೂ–4 ಎಂದು ಸಾಕ್ಷಿ ನುಡಿದಿದ್ದು, ದಿ:7–12–2012ರಿಂದ ದಿ:9–7–2013 ರವರೆಗೆ ತಾನು ಆಖೇತಿ ಗ್ರಾಮಪಂಚಾಯತಿಯ ಪಿಡಿಓ ಆಗಿ ಕರ್ತವ್ಯ ನಿರ್ವಹಿಸಿದ್ದೆ ಅಂತಾ ನುಡಿದಿರುತ್ತಾರೆ. 2008 ರಿಂದ 2011ನೇ ಸಾಲಿನವರೆಗೆ ತಾನು ಸದರಿ ಗ್ರಾಮಪಂಚಾಯಿತಿಯಲ್ಲಿ ಯಾವ ಹುದ್ದೆಯಲ್ಲಿಯೂ ಸಹಾ ಕರ್ತವ್ಯ ನಿರ್ವಹಿಸಿರುವುದಿಲ್ಲ ಅಂತಾ ನುಡಿದಿರುತ್ತಾರೆ. ಈ ಬಗ್ಗೆ ಇವರು ನಿ.ಡಿ.7, ನಿ.ಡಿ.8 ಮತ್ತು ನಿ.ಡಿ.9ರಂತೆ ಕರ್ತವ್ಯ ನಿರ್ವಹಿಸಿದ ಬಗ್ಗೆ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. ತಾನು ಈ ಕಾಮಗಾರಿಗೆ ಸಂಬಂಧಪಟ್ಟಂತೆ ಕರ್ತವ್ಯ ನಿರ್ವಹಿಸಿರುವುದಿಲ್ಲ ಮತ್ತು ಯಾವುದೇ ದಾಖಲಾತಿಗಳನ್ನು ತಯಾರಿಸಿರುವುದಿಲ್ಲ ಮತ್ತು ಸಹಿಯನ್ನು ಮಾಡಿರುವುದಿಲ್ಲ ಅಂತಾ ನುಡಿದಿರುತ್ತಾರೆ.

24.ಆಸನೌ–2 ಮತ್ತು 3 ಇವರು ತಮ್ಮ ಸಾಕ್ಷಿಯನ್ನು ಮಾಡಿರುವುದಿಲ್ಲ.

25.ಪಿಡಬ್ಲ್ಯೂ–2 ಇವರ ವರದಿಯನ್ನು ನಿ.ಪಿ.16ಅಂತಾ ಗುರುತಿಸಿಕೊಳ್ಳಲಾಗಿದೆ. ತಮ್ಮ ವರದಿಯಲ್ಲಿ ದಿ:11–11–2014 ಹಾಗೂ 12–12–2014ರಂದು ಸ್ಥಳ ತನಿಖೆಯಿಂದ ಕಂಡುಬಂದಿರುವ ಕಾಮಗಾರಿಗಳ ವಿವರಗಳನ್ನು ಈ ಕೆಳಗಿನಂತೆ ನಮೂದಿಸಿರುತ್ತಾರೆ.

1. ಆಖೇತಿ ಗ್ರಾಮದಲ್ಲಿ ರಾಜೀವ ಗಾಂಧಿ ಸೇವಾ ಕೇಂದ್ರ ಕಟ್ಟಡ ನಿರ್ಮಾಣ

2. ಆಖೇತಿ ಗ್ರಾಮದ ಆಖೇತಿ ವಾಡ ಸರ್ಕಾರೀ ಹಿರಿಯ ಪ್ರಾಥಮಿಕ ಕನ್ನಡ ಶಾಲೆಯಲ್ಲಿ ಸಸಿ ನಡಿಸುವುದು ಮತ್ತು ಮೈದಾನ ಸಮತಟ್ಟು ಮಾಡುವುದು ಹಾಗೂ ಸಂರಕ್ಷಣೆ
3. ಅನುಮೋಡ ಗ್ರಾಮದಲ್ಲಿ ಸರ್ಕಾರೀ ಆಯುರ್ವೇದ ದಾವಾಖಾನೆ ಆವರಣದಲ್ಲಿ ಸಸಿ ನಡಿಸುವುದು ಮತ್ತು ಮೈದಾನ ಸಮತಟ್ಟು ಮಾಡುವುದು ಹಾಗೂ ಸಂರಕ್ಷಣೆ
4. ಅನುಮೋಡ ಗ್ರಾಮದ ಹಿರಿಯ ಪ್ರಾಥಮಿಕ ಕನ್ನಡ ಶಾಲೆಯಲ್ಲಿ ಸಸಿ ನಡಿಸುವುದು ಮತ್ತು ಮೈದಾನ ಸಮತಟ್ಟು ಮಾಡುವುದು ಹಾಗೂ ಸಂರಕ್ಷಣೆ.
5. ಅನುಮೋಡ ಗ್ರಾಮದಲ್ಲಿ ಶ್ರೀ ವಿಲಾಸ ವಾಮನ ಗಾಂವಕರ ಜಮೀನಿಗೆ ತಡೆಗೋಡೆ ನಿರ್ಮಾಣ.
6. ತಿನ್ನೈಘಾಟ ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆಯಲ್ಲಿ ಸಸಿ ನಡಿಸುವುದು ಮತ್ತು ಮೈದಾನ ಸಮತಟ್ಟು ಮಾಡುವುದು ಹಾಗೂ ಸಂರಕ್ಷಣೆ
7. ಪಿರೇಗಾಳಿ ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆಯಲ್ಲಿ ಸಸಿ ನಡಿಸುವುದು ಮತ್ತು ಮೈದಾನ ಸಮತಟ್ಟು ಮಾಡುವುದು ಹಾಗೂ ಸಂರಕ್ಷಣೆ
8. ಜಳಪಟ್ಟ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆಯಲ್ಲಿ ಸಸಿ ನಡಿಸುವುದು ಮತ್ತು ಮೈದಾನ ಸಮತಟ್ಟು ಮಾಡುವುದು ಹಾಗೂ ಸಂರಕ್ಷಣೆ
9. ಗ್ರಾಮಪಂಚಾಯತಿ ಕಚೇರಿ ಆಖೇತಿ ಸಸಿ ನಡಿಸುವುದು ಮತ್ತು ಮೈದಾನ ಸಮತಟ್ಟು ಮಾಡುವುದು ಹಾಗೂ ಸಂರಕ್ಷಣೆ
10. ಜಲನಿರ್ಮಲ ಯೋಜನೆ 2011-12ನೇ ಸಾಲಿನಲ್ಲಿ ಹೆಚ್ಚುವರಿ ಅನುಧಾನದಡಿ ತಿನ್ನೈಘಾಟ ಗ್ರಾಮದಲ್ಲಿ ರಸ್ತೆ ಹಾಗೂ ಚರಂಡಿ ನಿರ್ಮಾಣ

11. ಜಲನಿರ್ಮಾಣ ಯೋಜನೆಯಡಿ ಮಾರಸಂಗಳ ಗ್ರಾಮದಲ್ಲಿ ಜರಿ ನೀರಿನ ಕುಡಿಯುವ ನೀರು ಸರಬರಾಜು ಯೋಜನೆ.
12. ಜಲನಿರ್ಮಾಣ ಯೋಜನೆಯಡಿ ತಿನ್ನೈಘಾಟ ಗ್ರಾಮಕ್ಕೆ ಪಂಪಿಂಗ್ ನೀರು ಸರಬರಾಜು ಯೋಜನೆ ನಿರ್ಮಾಣ
13. 13ನೇ ಹಣಕಾಸಿನ ಯೋಜನೆಯಡಿ ನಿರ್ವಹಿಸುವ ಕಾಮಗಾರಿಗಳಾದ 1) ಮಾರಸಿಂಗಳದ ಗಾವಡೆಯಲ್ಲಿ ಭಾವಿ ದುರಸ್ಥಿ, 2) ಅನುಮೋಡ ಗ್ರಾಮದಲ್ಲಿ ಶ್ರೀ ರಾವಜಿ ಗಾವಡೆ ಮನೆಯಿಂದ ದೇವಸ್ಥಾನವರೆಗೆ ಸಿಸಿ ಚರಂಡಿ/ಪಕ್ಕ ಚರಂಡಿ ನಿರ್ಮಾಣ ಕಾಮಗಾರಿ 3) ಆಖೇತಿ ಗ್ರಾಮದಲ್ಲಿ ಸರ್ಕಾರೀ ಹಿರಿಯ ಪ್ರಾಥಮಿಕ ಶಾಲೆ ಹಾಗೂ ವಿರಂಚೋಳ ರಸ್ತೆಗೆ ಸಿವಿ ನಿರ್ಮಾಣ 4) ಆಖೇತಿ ಗ್ರಾಮದಲ್ಲಿ ಶ್ರೀ ಅರುಣ ದೇಸಾಯಿ ಇವರ ಮನೆ ಪಕ್ಕದಲ್ಲಿ ಸಿಸಿ ಪಾದಚಾರಿ ರಸ್ತೆ ನಿರ್ಮಾಣ.
14. ಮಾರಸಂಗಳ (ದೇವಳ್ಳಿ) ಗ್ರಾಮದಲ್ಲಿ ನರೇಗಾ ಯೋಜನೆಯಡಿಯಲ್ಲಿ ಬಾಂದರ ನಿರ್ಮಾಣ
15. ಮೀರವಾಡ ಗ್ರಾಮದ ಶ್ರೀ ಅರ್ಜುನ ನಂದಗಡಕರ ರವರ ಜಮೀನಿನ ಹತ್ತಿರ 2010–11ನೇ ಸಾಲಿನ ನರೇಗಾ ಯೋಜನೆಯಡಿ ಬಾಂದರ ಮತ್ತು ಕಾಲುವೆ ನಿರ್ಮಾಣ
16. ಆಖೇತಿ ಗ್ರಾಮದ ಬಾಂದರಕ್ಕೆ 2009–10ನೇ ಸಾಲಿನ ನರೇಗಾ ಯೋಜನೆಯಡಿ ಸಿಸಿ ಕಾಲುವೆ ನಿರ್ಮಾಣ

26. ಈ ಹದಿನಾರು ಕಾಮಗಾರಿಗಳಲ್ಲಿ 1 ರಿಂದ 9, 11, 13, 14, 15 ಮತ್ತು 16 ಈ ಕಾಮಗಾರಿಗಳಲ್ಲಿ ಯಾವುದೇ ಅವ್ಯವಹಾರ ಆಗಿರುವುದಿಲ್ಲವೆಂದು ವರದಿಯಲ್ಲಿ ನಮೂದಿಸಿರುತ್ತಾರೆ.

27. ಕಾಮಗಾರಿ 10ಕ್ಕೆ ಸಂಬಂಧಪಟ್ಟಂತೆ ತಮ್ಮ ವರದಿಯಲ್ಲಿ ಜಲನಿರ್ಮಲ ಯೋಜನೆಯ 2011–12ನೇ ಸಾಲಿನ ಹೆಚ್ಚುವರಿ ಅನುಧಾನದಡಿ ತಿನ್ನೈಘಟ್ಟ ಗ್ರಾಮದಲ್ಲಿ ರಸ್ತೆ ಹಾಗೂ ಚರಂಡಿ

ನಿರ್ಮಾಣ. ಸದರಿ ಕಾಮಗಾರಿ ಅಡಿ 1800ಮೀ ಉದ್ದದ ಸಿಸಿ ಚರಂಡಿ, 70ಮೀ. ಉದ್ದದ ಸಿಸಿ ರಸ್ತೆ, 250ಮೀ ಉದ್ದದ 2ಪದರದ ಜೆಲ್ಲಿ ಹಾಗೂ ಡಾಂಬರಿನ ರಸ್ತೆ ಹಾಗೂ 250ಮೀ ಉದ್ದದ ಒಂದು ಜೆಲ್ಲಿ ಪದರದ ಡಾಂಬರಿನ ರಸ್ತೆ ನಿರ್ಮಿಸಿಲು ಅವಕಾಶ ಮಾಡಿಕೊಳ್ಳಲಾಗಿದೆ. ಈ ಕಾಮಗಾರಿಯನ್ನು 23,11,300/–ರೂ.ಗಳ ಕರಾರು ಮೊತ್ತದಲ್ಲಿ ನಿರ್ವಹಿಸಲು ಗುತ್ತಿಗೆದಾರರಿಗೆ ವಹಿಸಲಾಗಿದೆ. ಕಾಮಗಾರಿಯನ್ನು ದಿ:24–03–2011ರಂದು ಪ್ರಾರಂಭಿಸಿ ದಿ:9–11–2011ರಲ್ಲಿ ಪೂರ್ಣಗೊಳಿಸಲಾಗಿದೆ. 2ಪದರದ ಜೆಲ್ಲಿಯ ಡಾಂಬರಿನ ರಸ್ತೆಗೆ ಸಂಬಂಧಪಟ್ಟಂತೆ ಈ ಕಾಮಗಾರಿಯನ್ನು ಸ್ಥಳದಲ್ಲಿ ಪರಿಶೀಲಿಸಿದ್ದು ರಸ್ತೆಯ ಒಟ್ಟು 250ಮೀ ಉದ್ದ ಹಾಗೂ ಸರಾಸರಿ 3.80ಮೀ ಅಗಲವಿರುವುದು ಕಂಡುಬಂದಿದೆ ಈ ಕಾಮಗಾರಿಯಡಿ 0.075ಮೀ ದಪ್ಪದ ಗ್ರೇಡ್–2 ಜೆಲ್ಲಿ ಪದರ, 0.075ಮೀ ದಪ್ಪದ ಗ್ರೇಡ್–3 ಜೆಲ್ಲಿ ಪದರ, 20ಮಿ.ಮಿ. ದಪ್ಪದ ಚಿಪ್‌ಕಾರ್ಪೇಟ್ ಡಾಂಬರಿನ ಪದರ ಹಾಗೂ ಡಾಂಬರಿನ ಸೀಲ್‌ಕೋಟ್ ಪದರವನ್ನು ಅಳವಡಿಸಲಾಗಿದೆ. ರಸ್ತೆಯ ಒಟ್ಟು ದಪ್ಪವನ್ನು 2ಸ್ಥಳದಲ್ಲಿ ರಸ್ತೆ ಅಗೆದು ಪರಿಶೀಲಿಸಲಾಗಿದ್ದು, ಸರಾಸರಿ 0.17ಮೀ. ಇರುವುದು ಕಂಡುಬಂದಿದೆ. ಸ್ಥಳದಲ್ಲಿನ ಅಳತೆಗಳು ಅಳತೆ ಪುಸ್ತಕ ಸಂಖ್ಯೆ–1ರ ಪುಟ 8ರಲ್ಲಿ ದಾಖಲಿಸಿರುವ ಅಳತೆಗಳಿಗೂ ತಾಳೆಯಾಗಿದೆ. ಸದರಿ ಕಾಮಗಾರಿಯ ಸ್ಥಳ ಪರಿಶೀಲನೆ ಸಮಯದಲ್ಲಿ ರಸ್ತೆಯ ಸೀಲ್‌ಕೋಟ್ ಪದರ ಹಾಳಾಗಿದ್ದು, ಈ ಐಟಂಗೆ ಕಾಮಗಾರಿಯ ಅಂತಿಮ ಬಿಲ್ಲಿನಲ್ಲಿ (ಕ್ರಮ ಸಂಖ್ಯೆ:7ರಲ್ಲಿನ ಐಟಂ) 42.12ಚ.ಮೀ.ಗೆ 1.ಚ.ಮೀಗೆ ರೂ.937.50ರ ದರದಂತೆ ಪಾವತಿಸಿರುವ ಒಟ್ಟು 39,448/–ಗಳನ್ನು ವ್ಯರ್ಥವೆಚ್ಚವೆಂದು ಪರಿಗಣಿಸಬಹುದಾಗಿದೆ ಎಂದು ಅಭಿಪ್ರಾಯಿಸಲಾಗಿದೆ. ಈ ವ್ಯರ್ಥವೆಚ್ಚಕ್ಕೆ ಕಾರಣರಾದ ಅಧಿಕಾರಿಗಳ ವಿವರಗಳನ್ನು ತಮ್ಮ ವರದಿಯ ಪ್ಯಾರಾ ನಂ.5ರಲ್ಲಿ ನಮೂದಿಸಿದ್ದು ಅದರಲ್ಲಿ ಬೇರೆ ವ್ಯಕ್ತಿಗಳ ಜೊತೆಗೆ ಆಸನೌ–5 ಮತ್ತು 6ಇವರ ಹೆಸರು ಇರುತ್ತದೆ. ಉಳಿದ ವ್ಯಕ್ತಿಗಳು ಈ ಪ್ರಕರಣದಲ್ಲಿ ಆಸನೌ ಆಗಿರುವುದಿಲ್ಲ. ಮುಂದುವರೆದು ಈ ಎಲ್ಲಾ ಅಧಿಕಾರಿಗಳು 39,448/–ಗಳ ವ್ಯರ್ಥಕ್ಕೆ ಸಮನಾಗಿ ಹೊಣೆಗಾರರಾಗಿದ್ದಾರೆ. ಅಂದರೆ ರೂ.6,582/–ಗಳಿಗೆ ಪ್ರತಿಯೊಬ್ಬರು ಹೊಣೆಗಾರರಾಗಿದ್ದಾರೆ ಅಂತಾ ನಮೂದು ಇರುತ್ತದೆ.

28. ಆಸನೌ–6 ಇವರ ಪ್ರಕಾರ ತಿನ್ನೈಘಾಟ ಗ್ರಾಮದ 2ಪದರ ಜೆಲ್ಲಿಯ ಡಾಂಬರಿನ ರಸ್ತೆ ದಟ್ಟ ಅರಣ್ಯದೊಳಗೆ ಇದ್ದು, ಇಲ್ಲಿ ಸರಾಸರಿ 6ಮಿ.ಮಿ. ಮಳೆ ಬರುವುದರಿಂದ ರಸ್ತೆಯ ಮೇಲ್ಪದರ ಹಾಳಾಗಿರುತ್ತದೆ. ಆದರೆ ಕಾಮಗಾರಿಯನ್ನು ಚೆನ್ನಾಗಿಯೇ ನಿರ್ವಹಿಸಲಾಗಿರುತ್ತದೆ ಅಂತಾ ನುಡಿದಿರುತ್ತಾರೆ. ಆಸನೌ–6ಪರ ವಕೀಲರು ತನಿಖಾಧಿಕಾರಿಗಳ ಪಾಟೀ ಸವಾಲಿನಲ್ಲಿ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಿದ 3ವರ್ಷಗಳ ನಂತರ ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದು ಇರುತ್ತದೆ ಎನ್ನುವುದಕ್ಕೆ ತನಿಖಾಧಿಕಾರಿಗಳು ಒಪ್ಪಿಕೊಂಡಿರುತ್ತಾರೆ. ಮುಂದುವರೆದು ಕಾಮಗಾರಿ ನಡೆದ ಸ್ಥಳದಲ್ಲಿ ಹೆಚ್ಚಿನ ಮಳೆಯಾಗಿದ್ದರಿಂದ ರಸ್ತೆಯು ಸ್ವಲ್ಪ ಮಟ್ಟಿಗೆ ಹಾಳಾಗಿರುತ್ತದೆ ಅಂತಾ ಮಾಡಿದ ಸಲಹೆಗೆ ಪಿಡಬ್ಲ್ಯೂ–2 ಇವರು ಹೆಚ್ಚಿನ ಮಳೆ ಆದ ಬಗ್ಗೆ ತನಗೆ ಗೊತ್ತಿರುವುದಿಲ್ಲ ಅಂತಾ ಹೇಳಿರುತ್ತಾರೆ. ಅಲ್ಲದೆ ಕಾಮಗಾರಿ ನಡೆದ ಒಂದೇ ವರ್ಷಕ್ಕೆ ರಸ್ತೆ ಹಾಳಾಗುತ್ತದೆ ಅಂತಾ ಸಲಹೆ ನೀಡಿದ್ದು ಅದನ್ನು ಪಿಡಬ್ಲ್ಯೂ–2 ಇವರು ಅಲ್ಲಗೆಳೆದಿರುತ್ತಾರೆ. ಆಸನೌ–6 ಇವರು ಅಲ್ಲಿ 6ಮಿ.ಮಿ. ಮಳೆ ಬರುತ್ತಿತ್ತು ಎನ್ನುವ ಬಗ್ಗೆ ಸಂಬಂಧಪಟ್ಟ ಇಲಾಖೆಯಿಂದ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಅಲ್ಲದೆ ರಸ್ತೆ ಕಾಮಗಾರಿ ಪೂರ್ಣಗೊಂಡ ಒಂದೇ ವರ್ಷದವರೆಗೆ ಬಾಳಿಕೆ ಬರುತ್ತದೆ ಎನ್ನುವ ಬಗ್ಗೆಯೂ ಸಹಾ ಯಾವುದೇ ದಾಖಲಾತಿಯನ್ನು ಹಾಜರುಮಾಡಿರುವುದಿಲ್ಲ. ತನಿಖಾಧಿಕಾರಿಯು ತಮ್ಮ ವರದಿಯಲ್ಲಿ ಈ ಕಾಮಗಾರಿಗೆ ಸಂಬಂಧಪಟ್ಟಂತೆ 6ಜನ ಅಧಿಕಾರಿಗಳು ರೂ.39,488/–ಕ್ಕೆ ಸಮನಾಗಿ ಹೊಣೆಗಾರರಾಗಿದ್ದು ಪ್ರತಿಯೊಬ್ಬರು 6,582/–ರೂ.ಗಳಿಗೆ ಹೊಣೆಗಾರರಾಗಿರುತ್ತಾರೆ ಅಂತಾ ಹೇಳಿರುತ್ತಾರೆ. ಮೇಲೆ ಹೇಳಿದ ಪ್ಯಾರಾದಂತೆ ಇದಕ್ಕೆ ಎದುರುದಾರ ನಂ.5 ಮತ್ತು 6 ಇವರು ಜವಾಬ್ದಾರರಾಗಿರುತ್ತಾರೆ ಅಂತಾ ಹೇಳಿರುತ್ತಾರೆ. ಆದರೆ ಎದುರುದಾರ ನಂ.5 ಇವರು ಕೇವಲ 4ತಿಂಗಳು ಮಾತ್ರ ಪ್ರಭಾರಿಯಾಗಿ ಕರ್ತವ್ಯನಿರ್ವಹಿಸಿದ್ದರಿಂದ ಈ ಕಾಮಗಾರಿಗೆ ಇವರು ಜವಾಬ್ದಾರಿ ಇರುವುದಿಲ್ಲ ಅಂತಾ ಕಂಡುಬರುತ್ತದೆ. ಆದರೆ ಆಸನೌ–6ಇವರು ಮೇಲೆ ಹೇಳಿದ ಹಾಗೆ ಸರಿಯಾದ ವಿವರಣೆಯನ್ನು ನೀಡದ ಕಾರಣ ಇವರು ರೂ.6,582/–ಗಳಿಗೆ ಹೊಣೆಗಾರರಾಗಿರುತ್ತಾರೆ ಅಂತಾ ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ರುಜುವಾತು ಪಡಿಸಿರುತ್ತಾರೆ.

29.ಆದರಂತೆ ತಿನ್ನೆಘಾಟರಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಸಂಬಂಧಪಟ್ಟಂತೆ ತಮ್ಮ ವರದಿಯಲ್ಲಿ ಅಂದಾಜಿನಲ್ಲಿ 70ಮೀ. ಉದ್ದದ ಸಿಸಿ ರಸ್ತೆ ನಿರ್ಮಿಸಿಲು ಅವಕಾಶವಿದ್ದು, ಸ್ಥಳದಲ್ಲಿ 60ಮೀ. ಉದ್ದದ ರಸ್ತೆ ನಿರ್ಮಿಸಿಲಾಗಿದೆ. ರಸ್ತೆಯ ಸರಾಸರಿ ಅಗಲ 2.80ಮೀ.ಗಳಿದ್ದು, ಎಂ.15 ಕಾಂಕ್ರೀಟ್ ದಪ್ಪ 0.10ಮೀ ಇರುತ್ತದೆ. ರಸ್ತೆಯನ್ನು ನಿರ್ಮಿಸಿ 3ವರ್ಷಗಳಾಗಿದ್ದು, ರಸ್ತೆಯ ಸ್ಥಳ ತನಿಖೆ ಸಮಯದಲ್ಲಿ ಸುಸ್ಥಿತಿಯಲ್ಲಿರುವುದನ್ನು ಗಮನಿಸಲಾಗಿದೆ. ಆದರೆ ಅಳತೆ ಪುಸ್ತಕ ಸಂಖ್ಯೆ:1 ಪುಟ 22ರಲ್ಲಿ 70ಮೀ. ಉದ್ದದ ಸಿಸಿ ರಸ್ತೆ ನಿರ್ಮಿಸಿರುವುದಾಗಿ ದಾಖಲಿಸಿ ಬಿಲ್ಲು ಪಾವತಿಸಿದ್ದು, ಸ್ಥಳದಲ್ಲಿ 60ಮೀ. ಉದ್ದದ ರಸ್ತೆಯನ್ನು ಮಾತ್ರ ನಿರ್ಮಿಸಿಲಾಗಿದೆ. ಈ ರೀತಿ ನಿರ್ವಹಿಸಿರುವ ರಸ್ತೆಯ ಉದ್ದಕ್ಕಿಂತ 10ಮೀ ಹೆಚ್ಚಿನ ಉದ್ದಕ್ಕೆ ಅಳತೆ ದಾಖಲಿಸಿ ಬಿಲ್ಲು ಪಾವತಿಸಿರುವುದರಿಂದ ರೂ.10,059/-ಗಳನ್ನು ಹೆಚ್ಚುವರಿಯಾಗಿ ಪಾವತಿಸಿರುವುದಕ್ಕೆ ಕಾರಣರಾದ ಅಧಿಕಾರಿಗಳ ವಿವರಗಳನ್ನು ಪ್ಯಾರಾ ನಂ.6 ರಲ್ಲಿ ನಮೂದಿಸಿದ್ದು, ಅದರಲ್ಲಿಯೂ ಸಹಾ ಎದುರುದಾರ ನಂ.5 ಮತ್ತು 6 ಇವರ ಹೆಸರು ನಮೂದು ಇರುತ್ತದೆ. ಇವರ ಅಭಿಪ್ರಾಯದಂತೆ ಪ್ರತಿಯೊಬ್ಬ ಅಧಿಕಾರಿಯು 1,677/-ಗಳಿಗೆ ಹೊಣೆಗಾರರಾಗಿರುತ್ತಾರೆ ಅಂತಾ ನಮೂದು ಇರುತ್ತದೆ.

30.ಈ ಕಾಮಗಾರಿಗೆ ಸಂಬಂಧಪಟ್ಟಂತೆ ಎದುರುದಾರ ನಂ.6 ಇವರು ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕೆ 70ಮೀಟರ್ ಉದ್ದ 2ಮೀಟರ್ ಅಗಲ 1ಮೀಟರ್ ದಪ್ಪ ಕಾಮಗಾರಿಯನ್ನು ನಿರ್ವಹಿಸಲು ಅಂದಾಜಿನಲ್ಲಿ ಅವಕಾಶ ಇತ್ತು. ಪಂಚಾಯತಿ ಅಧ್ಯಕ್ಷರು, ವಿಡಬ್ಲ್ಯೂಎಸ್ಎಸ್‌ಸಿ ಅಧ್ಯಕ್ಷರು ಮತ್ತು ಗ್ರಾಮಸ್ಥರ ಬೇಡಿಕೆ ಮತ್ತು ಅವಶ್ಯಕತೆ ಅನುಗುಣವಾಗಿ 60ಮೀಟರ್ ಉದ್ದ, 2.8ಮೀ. ಅಗಲ ಮತ್ತು 0.1ದಪ್ಪ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಿರುತ್ತೇವೆ. ಇದರಲ್ಲಿ ಘನಮೀಟರ್ ಅಳತೆಯಲ್ಲಿ ತೆಗೆದುಕೊಂಡಾಗ 2.8ಮೀ. ಹೆಚ್ಚಿಗೆ ರಸ್ತೆಯನ್ನು ಮಾಡಿದ್ದು ಆದರೆ ಗುತ್ತಿಗೆದಾರರಿಗೆ ಹಣವನ್ನು ಪಾವತಿಸಿರುವುದು 14ಘನಮೀಟರ್‌ಗೆ ಮಾತ್ರವೇ ಆಗಿರುತ್ತದೆ ಅಂತಾ ಹೇಳಿರುತ್ತಾರೆ. ಈ ಬಗ್ಗೆ ಆಸನೌ-6ಪರ ವಕೀಲರು ಪಿಡಬ್ಲ್ಯೂ-2 ಇವರ ಪಾಟೀ ಸವಾಲಿನಲ್ಲಿ ಇವರ ವರದಿಯಂತೆ ಒಟ್ಟು 28ಚ.ಮೀ. ಹೆಚ್ಚಿಗೆ ರಸ್ತೆ ನಿರ್ಮಾಣವಾಗಿರುತ್ತದೆ ಎನ್ನುವುದು ಸರಿ ಅಂತಾ ಒಪ್ಪಿಕೊಂಡಿರುತ್ತಾರೆ. ಮುಂದುವರೆದು ಪಿಡಬ್ಲ್ಯೂ-2 ಇವರು 2ಮೀ.ಮಾತ್ರವೇ ಮಾಡಬೇಕಾಗಿದ್ದು 2.80ಮೀ ಮಾಡಲು ಯಾವುದೇ ಅನುಮೋದನೆಯನ್ನು

ತೆಗೆದುಕೊಂಡಿರುವುದಿಲ್ಲ ಅಂತಾ ನುಡಿದಿರುತ್ತಾರೆ. ಈ ಅಳತೆ ಹೆಚ್ಚು ಕಡಿಮೆ ಮಾಡಲು ಜನಗಳೇ ಕಾರಣ ಎಂದು ಸೂಚಿಸಿದ್ದು, ಅದು ಸರಿ ಇರುವುದಿಲ್ಲವೆಂದು ಪಿಡಬ್ಲ್ಯೂ–2 ಇವರು ನುಡಿದಿರುತ್ತಾರೆ.

31. ಆಸನೌ–6ರ ಪ್ರಕಾರ ತಾನು ಪಂಚಾಯತಿ ಅಧ್ಯಕ್ಷರು ಮತ್ತು ಜನರ ಹೇಳಿಕೆಯ ಮೇರೆಗೆ ಈ ರಸ್ತೆಯ ನಿರ್ಮಾಣದಲ್ಲಿ ಸ್ವಲ್ಪ ಬದಲಾವಣೆಯಾಗಿರುತ್ತದೆ ಅಂತಾ ಒಪ್ಪಿಕೊಂಡಿದ್ದು ಆದರೆ ಇವರು ಅಧ್ಯಕ್ಷರ ಹೇಳಿಕೆಯನ್ನಾಗಲಿ ಅಥವಾ ಜನರ ಹೇಳಿಕೆಯನ್ನಾಗಲಿ ಹಾಜರುಪಡಿಸಿರುವುದಿಲ್ಲ. ತನಿಖಾಧಿಕಾರಿಗಳ ಪ್ರಕಾರ ರಸ್ತೆಯ ವಿಸ್ತೀರ್ಣವನ್ನು ಹೆಚ್ಚಿಗೆ ಮಾಡಲು ಆಸನೌ–6 ಇವರಿಗೆ ಅಧಿಕಾರ ಇರುವುದಿಲ್ಲ. 2ಮೀ.ಗೆ ಎಷ್ಟು ಹಣ ಬೇಕಾಗುತ್ತದೆ ಅಷ್ಟೇ ಹಣವನ್ನು ಉಪಯೋಗಿಸಿ ಉಳಿದ ಹಣವನ್ನು ಸರ್ಕಾರಕ್ಕೆ ಭರಣ ಮಾಡಬೇಕಾಗಿತ್ತು. ಇವರು ತಮ್ಮ ಲಿಖಿತ ರಕ್ಷಣಾ ಹೇಳಿಕೆಯಲ್ಲಿ ಈ ಕಾಮಗಾರಿಯಿಂದ 14,082/–ರೂ. ಉಳಿತಾಯ ಆಗಿರುತ್ತದೆ ಅಂತಾ ಹೇಳಿದ್ದು ಆದರೆ ಈ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ತನಿಖಾಧಿಕಾರಿಗಳ ಪ್ರಕಾರ ಯಾವುದೇ ಕಾಮಗಾರಿಗಳನ್ನು ಬದಲಾವಣೆ ಮಾಡಬೇಕಾದರೆ ಸಂಬಂಧಪಟ್ಟ ಇಲಾಖಾ ಮೇಲಾಧಿಕಾರಿಗಳಿಂದ ಪರವಾನಿಗೆಯನ್ನು ಪಡೆದುಕೊಳ್ಳಬೇಕಾಗುತ್ತದೆ. ಆದರೆ ಪಡೆದುಕೊಂಡ ಬಗ್ಗೆ ದಾಖಲಾತಿಗಳನ್ನು ಸಲ್ಲಿಸದೆ ಇರುವುದರಿಂದ ಇವರು 1,677/–ರೂ.ಗಳಿಗೆ ಹೊಣೆಗಾರರಾಗಿರುತ್ತಾರೆ ಅಂತಾ ಹೇಳುತ್ತಾರೆ. ಆದ್ದರಿಂದ ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ಆಸನೌ–6 ಇವರು ಹೊಣೆಗಾರರಾಗಿರುತ್ತಾರೆ ಅಂತಾ ರುಜುವಾತು ಪಡಿಸಿರುತ್ತಾರೆ.

32. ಜಲನಿರ್ಮಲ ಯೋಜನೆಯಡಿ ತಿನ್ನೈಘಾಟ ಗ್ರಾಮಕ್ಕೆ ಪಂಪಿಂಗ್ ನೀರು ಸರಬರಾಜು ಯೋಜನೆ ನಿರ್ಮಾಣ ಈ ಕಾಮಗಾರಿಯನ್ನು 18,45,728/–ರೂ.ಗಳ ಗುತ್ತಿಗೆಕರಾರು ಮೊತ್ತದಲ್ಲಿ ಕೈಗೊಳ್ಳಲಾಗಿದೆ. ಈ ಯೋಜನೆಯಡಿ 3ಬೋರ್‌ವೆಲ್‌ಗಳ ಸಹಾಯದಿಂದ ಒಂದು ನೀರಿನ ಮೇಲ್ತೊಟ್ಟಿಗೆ ನೀರನ್ನು ಪಂಪ್ ಮಾಡಿ ಅಲ್ಲಿಂದ ಗ್ರಾಮಕ್ಕೆ ವಿತರಣಾ ಪೈಪ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಸದರಿ ಯೋಜನೆಯನ್ನು ಫೆಬ್ರವರಿ 2007ರಲ್ಲಿ ಪ್ರಾರಂಭಿಸಿ

ಮೇ 2008ರಲ್ಲಿ ಪೂರ್ಣಗೊಳಿಸಿರುವುದು ಒದಗಿಸಿರುವ ಬಿಲ್ಲುಗಳ ಪ್ರತಿಯಿಂದ ಕಂಡುಬಂದಿರುತ್ತದೆ.

33. ಸ್ಥಳ ತನಿಖಾ ಸಮಯದಲ್ಲಿ, ಯೋಜನೆ ಅನುಷ್ಠಾನಗೊಂಡು ಸುಮಾರು 6ವರ್ಷಗಳು ಮೇಲ್ಪಟ್ಟಿದ್ದು, ನೀರು ಸರಬರಾಜು ಸಮರ್ಪಕವಾಗಿ ಆಗುತ್ತಿರುವುದು ಸ್ಥಳೀಯರ ಹೇಳಿಕೆಯಿಂದ ಕಂಡುಬಂದಿರುತ್ತದೆ. ಸದರಿ ಯೋಜನೆಯಡಿ 3ಬೋರ್‌ವೆಲ್‌ಗಳಿದ್ದು ಇವುಗಳಿಂದ ನೀರು ಪಂಪ್ ಮಾಡಲು ನಿರ್ಮಿಸಿರುವ 3ಪಂಪ್‌ಹೌಸ್‌ಗಳಲ್ಲಿ ಪ್ರತಿ ಪಂಪ್ ಹೌಸಗೆ ಒಂದರಂತೆ ರೂ.38,400/–ಮೊತ್ತದ ಒಟ್ಟು 3ಸಂಖ್ಯೆಯ SENCO JN-2 Motel watger disinfections (ದೂರುದಾರರ ಪ್ರಕಾರ Chlorination Unit ಗಳು) ಗಳನ್ನು ಅಳವಡಿಸಿದ್ದು, ಅಳವಡಿಸಿದ ಕೆಲವೇ ತಿಂಗಳುಗಳಲ್ಲಿ, ಸದರಿ ಯುನಿಟ್‌ಗಳು ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿಲ್ಲದಿರುವುದನ್ನು ಮನಗಂಡು ಅವುಗಳನ್ನು ಡಿಸ್‌ಕನೆಕ್ಟ್ ಮಾಡಿದ್ದು, ಸ್ಥಳ ತನಿಖೆಯ ಸಮಯದಲ್ಲೂ ಸಹಾ ಯುನಿಟ್‌ಗಳು ಕರ್ತವ್ಯ ನಿರ್ವಹಿಸುತ್ತಿರಲಿಲ್ಲ. ಆದ್ದರಿಂದ 3ಯುನಿಟ್ x 38,400/–ರೂಗಳನ್ನು ಅಂದರೆ ಒಟ್ಟು ರೂ.1,15,200/–ಗಳನ್ನು ವ್ಯರ್ಥವೆಚ್ಚವೆಂದು ಪರಿಗಣಿಸಲಾಗಿದೆ. ಸದರಿ ಕಾಮಗಾರಿಯ ಬಗ್ಗೆ ಅಳತೆ ಪುಸ್ತಕ 1 ಪುಟ ನಂ.61 ರಲ್ಲಿ ದಾಖಲಿಸಿ, 4ನೇ ಹಾಗೂ ಅಂತಿಮ ಬಿಲ್ಲಿನಲ್ಲಿ ಪಾವತಿಸಿರುವುದು ಕಂಡುಬಂದಿದೆ. ಈ ವ್ಯರ್ಥವೆಚ್ಚಕ್ಕೆ ಸಂಬಂಧಪಟ್ಟಂತೆ ಪ್ಯಾರಾ ನಂ.7ರಲ್ಲಿ ಅಧಿಕಾರಿಗಳ ಹೆಸರುಗಳನ್ನು ನಮೂದಿಸಿದ್ದು, ಅದರಲ್ಲಿ ಆ.ಸ.ನೌ–1 ರಿಂದ 3 ಮತ್ತು 5 ಮತ್ತು 6 ಇವರ ಹೆಸರು ಇರುವುದಿಲ್ಲ.

34. ಪಿಡಬ್ಲ್ಯೂ–2 ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ಪ್ಯಾರಾ ನಂ.4(1)ರಲ್ಲಿ ವಿವಿಧ ವರ್ಷಗಳಲ್ಲಿ ನರೇಗಾ ಯೋಜನೆಯಡಿ ಕೈಗೊಳ್ಳಲಾಗಿರುವ ಹಲವಾರು ಗ್ರಾಮಗಳಲ್ಲಿನ ಸರ್ಕಾರೀ ಶಾಲೆಗಳಿಗೆ ಆವರಣ ಗೋಡೆ ನಿರ್ಮಿಸುವ ಹಾಗೂ ಶಾಲಾ ಮೈದಾನ ಸಮತಟ್ಟು ಮಾಡುವ ಕೆಲಸಕ್ಕೆ ಸಸಿ ನೆಡುವ ಕಾಮಗಾರಿಯ ಹೆಸರಿನಲ್ಲಿ ಅಂದಾಜು ಮಂಜೂರು ಮಾಡಿಕೊಂಡು, ಶಾಲೆಯ ಕಾಂಪೌಂಡ್ ಗೋಡೆ ಹಾಗೂ ಮೈದಾನ ಸಮತಟ್ಟು ಮಾಡುವ ಕೆಲಸವನ್ನು ನಿರ್ವಹಿಸಲಾಗಿದೆ.

ಸಸಿ ನೆಡುವ ಕಾಮಗಾರಿಯ ಅನುಧಾನವನ್ನು ಕಾಂಪೌಂಡ್ ಗೋಡೆ ನಿರ್ಮಾಣ ಹಾಗೂ ಮೈದಾನ ಸಮತಟ್ಟು ಮಾಡುವ ಕೆಲಸಕ್ಕೆ ಉಪಯೋಗಿಸಿಕೊಳ್ಳಲು ಈ ರೀತಿ ಮಾಡಲಾಗಿದೆ ಎಂದು ಭಾವಿಸಿದ್ದು, ಈ ರೀತಿ ಒಂದು ಕಾಮಗಾರಿಯ ಅನುಧಾನವನ್ನು ಬೇರೆ ಕಾಮಗಾರಿಗಳಿಗೆ ಉಪಯೋಗಿಸಿರುವುದು ಕರ್ತವ್ಯ ನಿರ್ಲಕ್ಷತೆ ಆಗಿದೆ. ಮಾಡಿಕೊಂಡಿರುವ ಶಾಲೆಯ ಅಂದಾಜುಗಳಲ್ಲಿ ಸಸಿ ನೆಡಿಸಲು ಅವಕಾಶವನ್ನೇ ಕಲ್ಪಿಸಿಕೊಂಡಿರುವುದಿಲ್ಲ. ಆದರೆ ಅಂದಾಜಿಗೆ ಸಸಿ ನೆಡುವ ಹೆಸರನ್ನು ಸೇರಿಸಿಕೊಳ್ಳಲಾಗಿದೆ. ಅಲ್ಲದೆ ನರೇಗಾ ಯೋಜನೆಯಡಿ ನಿರ್ವಹಿಸಲಾಗಿರುವ ಬಾಂದಾರ, ಶಾಲಾ ಮೈದಾನ ಸಮತಟ್ಟು ಮಾಡುವ ಹಾಗೂ ಕಾಂಪೌಂಡ್ ಗೋಡೆ ನಿರ್ಮಾಣ ಮಾಡುವ ಕಾಮಗಾರಿಗಳಿಗೆ ಯೋಜನೆ ಮಾರ್ಗಸೂಚಿಯನ್ವಯ 3 ಹಂತದ ಛಾಯಾಚಿತ್ರಗಳನ್ನು ದಾಖಲಿಸಿರುವುದು ಕಂಡುಬಂದಿರುವುದಿಲ್ಲ. 3 ಹಂತದ ಛಾಯಾಚಿತ್ರಗಳನ್ನು ಪರಿಶೀಲನೆಗೆ ಕೇಳಿದಾಗಲೂ ಸಹಾ ಒದಗಿಸಿರುವುದಿಲ್ಲ ಎಂದು ಹೇಳಿರುತ್ತಾರೆ. ಈ ಬಗ್ಗೆ ಎದುರುದಾರ ನಂ.1 ರಿಂದ 3 ಇವರು ಜವಾಬ್ದಾರರಾಗಿರುತ್ತಾರೆ ಅಂತಾ ಹೇಳಿರುತ್ತಾರೆ. ಈ ವಿಷಯದ ಬಗ್ಗೆ ತನಿಖಾಧಿಕಾರಿಗಳಿಗೆ ಆಸನೌ 1 ರಿಂದ 3 ಇವರು ಪಾಟೀ ಸವಾಲು ಮಾಡಿರುವುದಿಲ್ಲ. ಆದ್ದರಿಂದ ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ಆಸನೌ–1 ರಿಂದ 3 ಇವರು ಕರ್ತವ್ಯಲೋಪ ಎಸಗಿರುತ್ತಾರೆ ಅಂತಾ ರುಜುವಾತು ಪಡಿಸಿರುತ್ತಾರೆ.

35. ಈ ಪ್ರಕರಣದಲ್ಲಿ ಆ.ಸ.ನೌ–4 ಇವರು ಈ ವಿಚಾರಣೆಯಲ್ಲಿ ಚಾಲ್ತಿಯಲ್ಲಿರುವಾಗ ಇವರು ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ನಂ.6879/2016ನ್ನು ಸಲ್ಲಿಸಿದ್ದು ಮತ್ತು ಅದರಲ್ಲಿ ತಡೆಯಾಜ್ಞೆ ನೀಡಿದ್ದರಿಂದ, ಎದುರುದಾರ ನಂ.1 ರಿಂದ 3, 5 ಮತ್ತು 6 ಇವರ ವಿರುದ್ಧ ಪ್ರಕರಣವನ್ನು ಮುಂದುವರೆಸಿದ್ದು ಸಾಕ್ಷಿಗಳನ್ನು ದಾಖಲಿಸಿಕೊಂಡಿದ್ದು ಇರುತ್ತದೆ. ಸದರಿ ಆ.ಸ.ನೌ–4 ಇವರು ಸಲ್ಲಿಸಿದ ಅರ್ಜಿಯು 28–06–2021 ರಂದು ವಜಾಗೊಂಡಿದ್ದು, ನಂತರ ಆ.ಸ.ನೌ–4 ಇವರಿಗೆ ನೋಟೀಸ್ಸು ಕೊಟ್ಟು ವಿಚಾರಣೆ ನಡೆಯುತ್ತಿದ್ದುದರಿಂದ ಈ ವರದಿಯನ್ನು ಎದುರುದಾರ ನಂ.1 ರಿಂದ 3, 5 ಮತ್ತು 6 ಇವರಿಗೆ ಸಂಬಂಧಪಟ್ಟಂತೆ ಸಲ್ಲಿಸಿದ್ದು ಇರುತ್ತದೆ.

36. ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ–1 ರಿಂದ 3 ಇವರ ವಿರುದ್ಧ ಸಸಿ ನೆಡುವ ಕಾಮಗಾರಿ ಅನುದಾನವನ್ನು ಕಾಂಪೌಡ್ ನಿರ್ಮಾಣ ಮತ್ತು ಮೈದಾನ ಸಮತಟ್ಟು ಮಾಡುವ ಕೆಲಸಕ್ಕೆ ಉಪಯೋಗಿಸಿಕೊಂಡಿದ್ದು, ಈ ರೀತಿ ಒಂದು ಕಾಮಕಾರಿಯ ಅನುದಾನವನ್ನು ಬೇರೆ ಕಾಮಗಾರಿಗೆ ಉಪಯೋಗಿಸಿಕೊಂಡಿರುವುದು ಕರ್ತವ್ಯ ನಿರ್ಲಕ್ಷ್ಯತೆ ಆಗಿರುತ್ತದೆ, ಮಾಡಿಕೊಂಡಿರುವ ಶಾಲೆಯ ಅಂದಾಜುಗಳಲ್ಲಿ ಸಸಿ ನೆಡಲು ಅವಕಾಶವನ್ನೇ ಕಲ್ಪಿಸಿಕೊಂಡಿರುವುದಿಲ್ಲ ಹಾಗೂ ಅಲ್ಲದೇ ಈ ಕಾಮಗಾರಿಗೆ ನಿರ್ವಹಣೆಗೆ ಪೂರ್ಣ 3 ಹಂತದ ಛಾಯಾಚಿತ್ರಗಳನ್ನು ಸಲ್ಲಿಸಿರುವುದರಿಂದ ಇವರು ಕರ್ತವ್ಯ ಲೋಪ ಎಸಗಿರುತ್ತಾರೆ. ಆ.ಸ.ನೌ–6 ಇವರ ವಿರುದ್ಧ ದೋಷಾರೋಪಣೆಯಲ್ಲಿ ಹೇಳಿದ ಅಂಶ–1 ಮತ್ತು 2ನ್ನು ಭಾಗಶಃ ಸಾಬೀತುಪಡಿಸಿದ್ದು, ಅಂಶ–3ರ ಬಗ್ಗೆ ಸಾಬೀತುಪಡಿಸಿರುವುದಿಲ್ಲ. ಆ.ಸ.ನೌ–5 ಇವರ ವಿರುದ್ಧ ದೋಷಾರೋಪಣೆಯಲ್ಲಿ ಹೇಳಿದಂತೆ ರುಜುವಾತುಪಡಿಸಿರುವುದಿಲ್ಲ.

37. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ಭಾಗಶಃ ಸಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು ಅಂಶ–1 ಮತ್ತು 2ನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

38. **ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.**

## ನಿರ್ಣಯ

ಆ.ಸ.ನೌಕರ (1) **ಶ್ರೀ. ಪಿ.ಡಿ ಜಾಡರ,** ಹಿಂದಿನ ಕಾರ್ಯದರ್ಶಿ, ಅಖೇತಿ ಗ್ರಾಮ ಪಂಚಾಯತಿ, ಜೋಯಿಡಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ, ಪ್ರಸ್ತುತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ನಂದಿಗಡ್ಡೆ ಗ್ರಾಮ ಪಂಚಾಯಿತಿ (2) **ಶ್ರೀ. ಲಂಬೋದರ ಗಾಂವಕರ,** ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅಖೇತಿ ಗ್ರಾಮ ಪಂಚಾಯತಿ, ಪ್ರಸ್ತುತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅಗಸೂರ ಗ್ರಾಮ ಪಂಚಾಯತಿ (3) ಶ್ರೀ. ಸಿ.ಜಿ

**ಹಿರೇಮಠ,** ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಅಖೇತಿ ಗ್ರಾಮ ಪಂಚಾಯಿತಿ, ಪ್ರಸ್ತುತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಉಳವಿ ಗ್ರಾಮ ಪಂಚಾಯತಿ ಇವರುಗಳ ವಿರುದ್ಧ ಸಸಿ ನೆಡುವ ಕಾಮಗಾರಿ ಅನುದಾನವನ್ನು ಕಾಂಪೌಡ್ ನಿರ್ಮಾಣ ಮತ್ತು ಮೈದಾನ ಸಮತಟ್ಟು ಮಾಡುವ ಕೆಲಸಕ್ಕೆ ಉಪಯೋಗಿಸಿಕೊಂಡಿದ್ದು, ಈ ರೀತಿ ಒಂದು ಕಾಮಕಾರಿಯ ಅನುದಾನವನ್ನು ಬೇರೆ ಕಾಮಗಾರಿಗೆ ಉಪಯೋಗಿಸಿಕೊಂಡಿರುವುದು ಕರ್ತವ್ಯ ನಿರ್ಲಕ್ಷ್ಯತೆ ಆಗಿರುತ್ತದೆ, ಮಾಡಿಕೊಂಡಿರುವ ಶಾಲೆಯ ಅಂದಾಜುಗಳಲ್ಲಿ ಸಸಿ ನೆಡಲು ಅವಕಾಶವನ್ನೇ ಕಲ್ಪಿಸಿಕೊಂಡಿರುವುದಿಲ್ಲ ಹಾಗೂ ಅಲ್ಲದೇ ಈ ಕಾಮಗಾರಿಗೆ ನಿರ್ವಹಣೆಗೆ ಪೂರ್ಣ 3 ಹಂತದ ಛಾಯಾಚಿತ್ರಗಳನ್ನು ಸಲ್ಲಿಸಿರುವುದರಿಂದ ಇವರು ಕರ್ತವ್ಯ ಲೋಪ ಎಸಗಿರುತ್ತಾರೆ;

(5) **ಶ್ರೀ. ಎಸ್.ಕೆ ನಾಯಕ,** ಉಪ ಯೋಜನಾ ವ್ಯವಸ್ಥಾಪಕರು, ಜಲನಿರ್ಮಲ ಯೋಜನೆ, ಜಿಲ್ಲಾ ನೆರವು ಘಟಕ, ಜಿಲ್ಲಾ ಪಂಚಾಯಿತಿ, ಉತ್ತರ ಕನ್ನಡ ಜಿಲ್ಲೆ, ಪ್ರಸ್ತುತ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಿ.ಆರ್.ಇ ಉಪ-ವಿಭಾಗ, ಕಾರವಾರ ಇವರ ವಿರುದ್ಧ ಕೈಬಿಡಲಾಗಿದೆ; ಮತ್ತು

(6) **ಶ್ರೀ. ಬಿ ಶಂಕರಪ್ಪ,** ಸಹಾಯಕ ನಿರ್ದೇಶಕರು (ತಾಂತ್ರಿಕ), ಜಲನಿರ್ಮಲ ಯೋಜನೆ, ಜಿಲ್ಲಾ ನೆರವು ಘಟಕ, ಜಿಲ್ಲಾ ಪಂಚಾಯತಿ, ಉತ್ತರ ಕನ್ನಡ, ಪ್ರಸ್ತುತ ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.2, ರಸ್ತೆ ಮತ್ತು ಸಂಪರ್ಕ ವಿಶೇಷ ಉಪ-ವಿಭಾಗ, ಅನೆಕ್ಸ್ ಕಟ್ಟಡ, ಕೆ.ಆರ್ ವೃತ್ತ, ಬೆಂಗಳೂರು ಇವರು ಪ್ಯಾರಾ ನಂ.28ರಲ್ಲಿ ಹೇಳಿದ ಹಾಗೆ ರೂ.6,582/- ಗಳಿಗೆ ಹೊಣೆಗಾರರಾಗಿರುತ್ತಾರೆ ಹಾಗೂ ಪ್ಯಾರಾ ನಂ.31 ರಲ್ಲಿ ಹೇಳಿದ ಹಾಗೆ ರೂ.1,677/- ಗಳಿಗೆ ಹೊಣೆಗಾರರಾಗಿರುತ್ತಾರೆ.

ಆ.ಸ.ನೌ–1 ರವರ ನಿವೃತ್ತಿ ದಿನಾಂಕ: 30/04/2027; ಆ.ಸ.ನೌ–2 ರವರ ನಿವೃತ್ತಿ ದಿನಾಂಕ: 30/04/2041; ಆ.ಸ.ನೌ–3 ರವರ ನಿವೃತ್ತಿ ದಿನಾಂಕ: 30/06/2021; ಆ.ಸ.ನೌ–5 ರವರ ನಿವೃತ್ತಿ ದಿನಾಂಕ: 30/06/2016 ಮತ್ತು ಆ.ಸ.ನೌ–6 ರವರ ನಿವೃತ್ತಿ ದಿನಾಂಕ: 28/02/2017 ಆಗಿರುತ್ತದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

Bangalore 2017

(ಸುದೇಶ್ ರಾಜಾರಾಮ್ ಪರದೇಶಿ)
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. Nelson Shavera D'Leema, R/o Thinaighata, Joida Taluk, Karwar, Uttara Kananda District. |
| | **PW-2** | Sri. M Deviprasad S/o late M. Krishnamurthy, Rtd. EE, Girinagar, Bengaluru. |
| 2 | **Documents marked on behalf of the Disciplinary Authority Ex.P-1 to Ex.P-20** | |
| | **Ex.P.1 & 1(a)** | Complaint dtd: 10/11/12 given to this institution with signature. |
| | **Ex.P.2& 2(a)** | Form No.1 with signature. |
| | **Ex.P.3& 3(a)** | Form No.2 with signature (Affidavit). |
| | **Ex.P.4** | Letter dtd: 01/10/2011 submitted by Secretary, Akethi Gram Panchayath. |
| | **Ex.P.5** | Letter dtd: 16/06/2012 submitted by Secretary, Akethi Gram Panchayath. |
| | **Ex.P.6** | Letter dtd: 20/09/2012 submitted by PDO, Akethi Gram Panchayath. |
| | **Ex.P.7** | Letter dtd: 28/07/2012 addressed to PDO, Akethi Gram Panchayath, Joida. |
| | **Ex.P.8** | Letter dtd: 17/10/2012 addressed to CEO, ZP, Uttara Kannada. |

| | | |
|---|---|---|
| | **Ex.P.9** | Letter dtd: 18/10/2012 addressed to EO, TP, Joida. |
| | **Ex.P. 10** | Rejoinder. |
| | **Ex.P. 11** | R.A Bill 1st & Final. |
| | **Ex.P. 12** | M.B Book. |
| | **Ex.P. 13** | M.B Book. |
| | **Ex.P. 14** | R.A Bill 1st & Final. |
| | **Ex.P. 15** | Letter dtd: 06/08/2015 submitted to CEO, ZP, Uttara Kannada with enclosures. |
| | **Ex.P. 16** | Investigation report. |
| | **Ex.P. 17** | Spot mahazar. |
| | **Ex.P. 18** | Spot mahazar. |
| | **Ex.P. 19** | C.D (Xerox) |
| | **Ex.P. 20** | C.D (Xerox) |
| 3 | **Witness examined on behalf of the DGO, Documents marked on behalf of the DGO** | |
| | **DW-1** | Sri. Srikanth Kamu Nayak, Rtd. AEE, PWD, Karwara. |
| | **DW-2** | Sri. H.B Shankarappa S/o Basappa, Rtd. AEE, PWD, Davanagere. |
| | **DW-3** | Sri. Parashuram Doddapakirappa Jadara, Secretary, Nandigadde Gram Panchayath, Joida. |

| | | |
|---|---|---|
| | **DW-4** | Sri. Channaveeraiah Havaiah Hiremat, Secretary, Uluvi Gram Panchayath, Joida. |
| 4 | **Documents marked on behalf of the DGOs through the complainant** | |
| | **Ex.D.1** | Details regarding Deputy Project Manager submitted by EE, RDW&SD, Karwar. |
| | **Ex.D.2** | CTC. |
| | **Ex.D.3** | M.B Book. |
| | **Ex.D.4** | CTC. |
| | **Ex.D.5** | Bill. |
| | **Ex.D.6** | Receipt of cheque. |
| | **Ex.D.7** | List of charge taken. |
| | **Ex.D. 8** | O.M dtd: 29/05/2013 by EO, TP, Joida. |
| | **Ex.D.9** | List of charge given. |

Dated this the 20th July, 2022

Paradeshi 20/7

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.

## GOVERNMENT OF KARNATAKA

## KARNATAKA LOKAYUKTA

No.UPLOK-1/DE/199/2016/ARE-14

Multi Storied Building,
Dr. B.R. Ambedkar Veedhi,
Bengaluru-560001
Date: 25th July, 2022.

## RECOMMENDATION

Sub: Departmental Inquiry against Sriyuths:

(1) Jadara, Secretary, Akhethi Grama Panchayathi, Akhethi.

(2) Lambodara Gaovonkara, Panchayath Development Officer, Akethi Grama Panchayathi.

(3) C.G.Hiremath, the then Panchayath Development Officer, Akethi Grama Panchayathi.

(4) Mukkanna Karigara, Deputy Project Manager, Jala Nirmala Yojane, Zilla Neravu Gataka, Zilla Panchayath, Uttara Kannada District.

(5) S.K.Naik, Deputy Project Manager, Jala Nirmala Yojane, Zilla Neravu Gataka, Zilla Panchayath, Uttara Kannada District.

(6) B.Shankarappa, Assistant Director (Technical), Jala Nirmala Yojane, Zilla Neravu Gataka, Zilla Panchayath, Uttara Kannada District-reg.,

Ref: 1) Government Order No.ಗ್ರಾಅಪ 110 ವಿಸೇಐ 2016, Bengaluru, dated: 20/06/2016.

2) Nomination Order No.UPLOK-1/DE/199/2016, Bengaluru, dated: 24/06/2016 of Upalokayukta, State of Karnataka, Bengaluru.

3) Inquiry Report dated: 20/07/2022 of Additional Registrar of Enquiries-14, Karnataka Lokayukta, Bengaluru.

*****

The Government by its order dated: 20/06/2016 initiated the disciplinary proceedings against (1) Shri Jadara, Secretary, Akhethi Grama Panchayathi, Akhethi; (2) Shri Lambodara Gaovonkara, Panchayath Development Officer, Akethi Grama Panchayathi; (3) Shri C.G.Hiremath, the then Panchayath Development Officer, Akethi Grama Panchayathi; (4) Shri Mukkanna Karigara, Deputy Project Manager, Jala Nirmala Yojane, Zilla Neravu Gataka, Zilla Panchayath, Uttara Kannada District; (5) Shri S.K.Naik, Deputy Project Manager, Jala Nirmala Yojane, Zilla Neravu Gataka, Zilla Panchayath, Uttara Kannada District and, (6) Shri B.Shankarappa, Assistant Director (Technical), Jala Nirmala Yojane, Zilla Neravu Gataka, Zilla Panchayath, Uttara Kannada District (hereinafter referred to as Delinquent Government Officials, for short as DGOs No.1 to 6) and entrusted the Departmental Inquiry to this Institution.

2. This Institution by Nomination Order No.UPLOK-1/DE/199/2016, Bengaluru, dated: 24/06/2016 nominated Additional Registrar of Enquiries-7, Karnataka Lokayukta, Bengaluru, as

the Inquiry Officer to frame charges and to conduct Departmental Inquiry against DGOs No.1 to 6 for the alleged charge of misconduct, said to have been committed by them. Subsequently, by Order No.UPLOK-1 & 2/DE/Transfers/2018, Bengaluru, dated: 06/08/2018, the Additional Registrar of Enquiries-14, Karnataka Lokayukta, Bengaluru was re-nominated as Inquiry Officer to conduct Departmental Inquiry against DGOs No.1 to 6.

3. The DGO No.1, Shri Jadara, Secretary, Akhethi Grama Panchayathi, Akhethi; DGO No.2, Shri Lambodara Gaovonkara, Panchayath Development Officer, Akethi Grama Panchayathi; DGO No.3, Shri C.G.Hiremath, the then Panchayath Development Officer, Akethi Grama Panchayathi; DGO No.4, Shri Mukkanna Karigara, Deputy Project Manager, Jala Nirmala Yojane, Zilla Neravu Gataka, Zilla Panchayath, Uttara Kannada District; DGO No.5, Shri S.K.Naik, Deputy Project Manager, Jala Nirmala Yojane, Zilla Neravu Gataka, Zilla Panchayath, Uttara Kannada District and DGO No.6, Shri B.Shankarappa, Assistant Director (Technical), Jala Nirmala Yojane, Zilla Neravu Gataka, Zilla Panchayath, Uttara Kannada District were tried for the following charges:

**ANNEXURE-I**

**CHARGE :**

That you DGO Nos. 1) Sri.P.D.Jadara, the then Secretary, Akhethi Gram Panchayath, Joida Taluk, Uttara Kannada District, Presently working as PDO, Nandigadde Gram Panchayath, 2) Sri.Lambodara Chandrakantha Gaonkar – the then PDO, Akhethi Gram Panchayath, presently working as PDO, Agasura Gram Panchayath, 3) Sri.C.H.Hiremath – the then PDO, Akhethi Gram Panchayath, presently working as PDO, Ulavi Gram Panchayath, 4) Sri.Mukkanna Karigara- Deputy Project Manager, Jala Nirmala Yojane, Zilla Neravu Ghataka, Z.P, Uttara Kannada District, presently working as Deputy Secretary, Zilla Panchayath, Raichur, 5) Sri.S.K.Naik - Deputy Project Manager, Jala Nirmala Yojane, Zilla Neravu Ghataka, Z.P, Uttara Kannada District, presently working as Assistant Executive Engineer, PRE Sub-Division, Karwar and 6) Sri.B.Shankarappa – Assistant Director (Technical), Jala Nirmala Yojane, Zilla Neravu Ghataka, Z.P, Uttara Kannada District, presently working as Assistant Executive Engineer No.2, Road and communication Special Sub-division, Annex building, 5th Floor, K.R.Circle, Bangalore while discharging your duties:

i. Excess measurements were recorded in the measurement book in respect of tar work of

the road in Tinaighat Village during the year 2011-12 and thus an amount of Rs.39,418/- is found wasteful expenditure.

ii. An amount of Rs.10,059/- is the wasteful expenditure on account of showing excess measurements of CC Road in Tinaighat village during 2011-12.

iii. Even though three chlorination units at the cost of Rs.38,400/- each are installed in 3 pumping house for supply of drinking water in Tinaighat village during the year 2011-12, the same are not found working and they are disconnected and so amount of Rs.1,15,200/- is wasteful expenditure.

and thereby you failed to maintain absolute integrity and devotion to duty and committed an act which is unbecoming of Government Servants and thus you are guilty of misconduct under Rule 3(1)(i) to (iii) of KCS (Conduct) Rules 1966.

4. The Inquiry Officer (Additional Registrar of Enquiries-14) on proper appreciation of oral and documentary evidence has held that, the Disciplinary Authority has 'Proved' the charges leveled against **DGO No.1**, Shri Jadara, Secretary, Akhethi Grama Panchayathi, Akhethi; **DGO No.2**, Shri Lambodara Gaovonkara, Panchayath Development Officer, Akethi Grama Panchayathi;

**DGO No.3**, Shri C.G.Hiremath, the then Panchayath Development Officer, Akethi Grama Panchayathi and **DGO No.6**, Shri B.Shankarappa, Assistant Director (Technical), Jala Nirmala Yojane, Zilla Neravu Gataka, Zilla Panchayath, Uttara Kannada District.

The Disciplinary Authority has 'Not Proved' the charge leveled against **DGO No.5**, S.K.Naik, Deputy Project Manager, Jala Nirmala Yojane, Zilla Neravu Gataka, Zilla Panchayath, Uttara Kannada District.

The Departmental Inquiry initiated against **DGO No.4**, Mukkanna Karigara, Deputy Project Manager, Jala Nirmala Yojane, Zilla Neravu Gataka, Zilla Panchayath, Uttara Kannada District is still pending before Disciplinary Authority.

5. On perusal of the Inquiry Report, in order to prove the guilt of the DGOs No.1, 2, 3, 5 and 6, the Disciplinary Authority has examined two witnesses i.e., PW-1 and PW-2 and Ex. P-1 to P-20 documents were got marked. In fact, DGO No.6, was also examined himself as DW-2 and on behalf of DGOs, DW-1, DW-3 and DW-4 were also examined and Ex. D-1 to D-9 documents were got marked.

6. On re-consideration of Inquiry Report and taking note of the totality of the circumstances of the case, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of the Inquiry Officer.

7. As per the First Oral Statement of DGOs No.1, 2, 3, 5 and 6 furnished by the Inquiry Officer, DGO No.1, Shri Jadara, will retire from service on 30/04/2027; DGO No.2, Shri Lambodara Gaovonkara, will retire from service on 30/04/2041; DGO No.3, Shri C.G.Hiremath, has retired from service on 30/06/2021; DGO No.5, Shri S.K.Naik, has retired from service on 30/06/2016 and DGO No.6, Shri B.Shankarappa, has retired from service on 28/02/2017.

8. Having regard to the nature of charge 'Proved' the charge leveled against DGOs No.1, Shri Jadara; DGO No.2, Shri Lambodara Gaovonkara; DGO No.3, Shri C.G.Hiremath and DGO No.6, Shri B.Shankarappa and 'Not Proved' the charge leveled against DGO No.5, Shri S.K.Naik and on consideration of the totality of circumstances:-

i. "It is hereby recommended to the Government to impose penalty of withholding three annual increments payable to DGO No.1, Shri Jadara, Secretary, Akhethi Grama Panchayathi, Akhethi District with cumulative effect".

ii. "It is hereby recommended to the Government to impose penalty of withholding three annual increments payable to DGO No.2, Shri Lambodara Gaovonkara, Panchayath Development Officer, Akethi Grama Panchayathi with cumulative effect".

iii. "It is hereby recommended to the Government to impose penalty of withholding 10% of pension payable to DGO No.3, C.G.Hiremath, the then Panchayath Development Officer, Akethi Grama Panchayathi for a period of three years".

iv. It is hereby recommended to the Government to accept the report of Inquiry Officer and to exonerate DGO No.5, S.K.Naik, Deputy Project Manager, Jala Nirmala Yojane, Zilla Neravu Gataka, Zilla Panchayath, Uttara Kannada District, of the charges leveled against DGO No.5.

v. "It is hereby recommended to the Government to impose penalty of withholding 10% of pension payable to DGO No.6, B.Shankarappa, Assistant Director (Technical), Jala Nirmala Yojane, Zilla Neravu Gataka, Zilla Panchayath, Uttara Kannada District for a period of three years and also to recover a sum of Rs.6,582/- and Rs.1,677/-, totally Rs.8,259/- from the salary and other allowances payable to DGO No.6, Shri B.Shankrappa".

9. Action taken in the matter shall be intimated to this Authority.

Connected records are enclosed herewith.

25/7/22

**(JUSTICE K.N.PHANEENDRA)**
UPALOKAYUKTA-2,
STATE OF KARNATAKA.